

# ಭರವಸೆಯ ಸಮಾವೇಶ - ಸಕಾರಾತ್ಮಕ ಸ್ಪಂಧನೆಯ ನಿರೀಕ್ಷೆ ವ್ಯವಸ್ಥಾಪಕರಿಗೆ ಅಭಿನಂಧನೆ

ರಾಜ್ಯದ ಸಹಕಾರಿ ಸಂಸ್ಥೆಗಳು ಎಲ್ಲರೂ ಸ್ವಯಂ ಪ್ರೇರಣೆಯಿಂದ ಒಗ್ಗಟ್ಟಾಗಿ ತಮಗೆ ಒದಗಿಬರಲಿರುವ ವಿಪತ್ತು ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸುವ ನಿರ್ಣಯ ತೆಗೆದು ಕೊಳ್ಳುವುದರ ಜೊತೆಗೆ ರಾಜ್ಯ ಸರಕಾರವನ್ನು ತಮ್ಮ ಈ ಕಾರ್ಯಕ್ಕಾಗಿ ಬೆಂಬಲಿಸುವಂತೆ ವಿನಂತಿಸುವುದರ ಜೊತೆಗೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಅನೇಕ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಿರುವುದು ಸಹಕಾರಿ ಕ್ಷೇತ್ರದ ದೊಡ್ಡ ಸಾಧನೆಯೆಂದು ಎಂದು ವಿಶ್ಲೇಷಿಸಿದರೆ ಅತಿಶಯೋಕ್ತಿಯಲ್ಲ.

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ವರ್ಷ 2012ರ ಮಕರ ಸಂಕ್ರಾಂತಿಯ ಹಾಗೂ ಸಹಕಾರಿ ದಿನಾಚರಣೆಯ ಅಂಗವಾಗಿ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ. ಎಲ್ಲ ಸಹಕಾರಿಗಳ ಜೀವನದಲ್ಲಿ ಸುಖಶಾಂತಿ ನೆಮ್ಮದಿಯನ್ನು ಭಗವಂತನು ದಯಪಾಲಿಸಲಿ ಎಂದು ಹಾರೈಸುತ್ತೇನೆ. ನೂತನ ವರ್ಷದಲ್ಲಿ ಸಹಕಾರಿಗಳು ಹೆಚ್ಚು ಕ್ರೀಯಾಶೀಲರಾಗಲು ಅಧಿಕ ಉತ್ಸಾಹ ದೊರಕಲಿ ಎಂದು ಹಾರೈಸುತ್ತೇನೆ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಪಣತೊಟ್ಟು ಕಾರ್ಯನಿರ್ವಹಣೆ ಮಾಡುವಂತಾಗಲಿ ಎಂದು ಹಾರೈಸುತ್ತೇನೆ.

ದಿನಾಂಕ 27/12/2011 ಸಹಕಾರ ಕ್ಷೇತ್ರಕ್ಕೆ ಒಂದು ಐತಿಹಾಸಿಕ ದಿನ. ಮರೆಯಲಾಗದ ದಿನ. ರಾಜ್ಯದ ಸಹಕಾರಿ ಸಂಸ್ಥೆಗಳು ಎಲ್ಲರೂ ಸ್ವಯಂ ಪ್ರೇರಣೆಯಿಂದ ಒಗ್ಗಟ್ಟಾಗಿ ತಮಗೆ ಒದಗಿಬರಲಿರುವ ವಿಪತ್ತು ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸುವ ನಿರ್ಣಯ ತೆಗೆದು ಕೊಳ್ಳುವುದರ ಜೊತೆಗೆ ರಾಜ್ಯ ಸರಕಾರವನ್ನು ತಮ್ಮ ಈ ಕಾರ್ಯಕ್ಕಾಗಿ ಬೆಂಬಲಿಸುವಂತೆ ವಿನಂತಿಸುವುದರ ಜೊತೆಗೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಅನೇಕ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಿರುವುದು ಸಹಕಾರಿ ಕ್ಷೇತ್ರದ ದೊಡ್ಡ ಸಾಧನೆಯೆಂದು ಎಂದು ವಿಶ್ಲೇಷಿಸಿದರೆ ಅತಿಶಯೋಕ್ತಿಯಲ್ಲ. ಈ ಸಮಾವೇಶವನ್ನು ವ್ಯವಸ್ಥೆ ಮಾಡಿದ ಕನಾಟಕ ಸ್ಟೇಟ್ ಕೋ-ಆಪರೇಟಿವ ಸೋಸೈಟೀಸ್ ಅಸೋಸಿಯೇಶನ್ ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲ ಪದಾಧಿಕಾರಿಗಳಿಗೆ ಸಂಯುಕ್ತ ಸಹಕಾರಿಯು ಅಭಿನಂದನೆ ಸಲ್ಲಿಸುತ್ತದೆ.

ಒಗ್ಗಟ್ಟಿನ ಹೋರಾಟ ನಮ್ಮೆಲ್ಲ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗಿದೆ. ಈ ಸಮಾವೇಶ ಸಹಕಾರಿ ಸಂಸ್ಥೆಗಳಲ್ಲಿ ಹೊಸ ಚೈತನ್ಯ ಮೂಡಿಸಿದೆ. ಏಕತೆಯ ಸಂಚಲನವಾಗಿದೆ. ಈ ಸಾಧನೆಗೆ ಸ್ಪಂದಿಸಿದ, ಸಹಕರಿಸಿದ ಎಲ್ಲ ಸಹಕಾರಿಗಳು ಅಭಿನಂದನಾರ್ಹರು. ಗುರಿಸಾಧನೆಯವರೆಗೂ ಈ ಹುಮ್ಮಸ್ಸು ಇರಲೇಬೇಕಾದುದು ಅಗತ್ಯ.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕೇಂದ್ರದಲ್ಲಿ ರಾಜ್ಯ ಸರಕಾರದ ವಿಶೇಷ ಪ್ರತಿನಿಧಿ ಹಾಗೂ ಮಾಜಿ ಕೇಂದ್ರದ ರಾಜ್ಯ ಹಣಕಾಸು ಸಚಿವ ಶ್ರೀ ಧನಂಜಯಕುಮಾರ ಸಹಕಾರ ಸಂಘಗಳಿಗೆ ಒದಗಿ ಬಂದಿರುವ ಈ ವಿಪತ್ತನ್ನು ನಿವಾರಿಸಲು ಅಗತ್ಯವೆನಿಸಬಹುದಾದ ಕ್ರಮವಿಡುವುದಾಗಿ ಭರವಸೆ ನೀಡಿರುವುದು, ಕೇಂದ್ರ ಕಂಪನಿ ವ್ಯವಹಾರಗಳ ಸಚಿವ ಶ್ರೀ ವೀರಪ್ಪ ಮೋಯಿಲಿಯವರು, ರಾಜ್ಯದ ಮುಖ್ಯಮಂತ್ರಿ ಶ್ರೀ ಡಿ.ವಿ.ಸದಾನಂದಗೌಡ ರವರು ಹಾಗೂ ರಾಜ್ಯದ ಸಹಕಾರ ಸಚಿವ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಕಾರಣಾಂತರಗಳಿಂದ ಕಾರ್ಯಕ್ರಮದಲ್ಲಿ ಭಾಗವಹಿಸಲ್ಲಿಲ್ಲ. ಆದರೆ ಸಹಕಾರ ಕ್ಷೇತ್ರದ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸುವ ಹಾಗೂ ಬೇಡಿಕೆಗಳನ್ನು ಸಂಬಂಧಿಸಿವರೂಡನೆ ಮಾತನಾಡಿ ಬಗೆಹರಿಸಲು ಕ್ರಮವಿಡುವುದಾಗಿ ಸಭೆಗೆ ಪತ್ರ ಕಳಿಸಿರುವುದು ಸಹಕಾರಿಗಳಲ್ಲಿ ಆಶಾಭಾವನೆಯನ್ನು ಮೂಡಿಸಿದೆ. ಹೋರಾಟದ ಹುಮ್ಮಸ್ಸನ್ನು ಹೆಚ್ಚಿಸಿದೆ.

ಸಭೆಯಲ್ಲಿ ಭಾಗವಹಿಸಿದ ಗಣ್ಯರೆಲ್ಲರೂ ಈ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸುವುದರ ಜೊತೆಗೆ ಸಂಬಂಧಿಸಿದವರಲ್ಲಿ ಮಾತನಾಡಿ ಪರಿಹಾರಕ್ಕೆ ಸೂಕ್ತ ಕ್ರಮವಿಡುವುದಾಗಿ ತಿಳಿಸಿರುವುದು ಸ್ವಾಗತಾರ್ಹ ಬೆಂಬಲ ವ್ಯಕ್ತಪಡಿಸಿದ ಎಲ್ಲ ಗಣ್ಯರೂ ಅಭಿನಂದನಾರ್ಹರು.

ಸಮಾವೇಶದ ನಿರ್ಣಯಗಳನ್ನು ಅನಿಷ್ಠಾನಕ್ಕೆ ಅಗತ್ಯ ಕ್ರಮಗಳು ಆದ್ಯತೆಯ ಮೇಲೆ ಜರುಗಬೇಕು. ಈ ಕ್ರಮಗಳ ಅನುಷ್ಠಾನಕ್ಕಾಗಿ ಎಲ್ಲ ಹಂತದವರೆಗಿನ ಹೋರಾಟಕ್ಕೆ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳು ಸಂಪೂರ್ಣ ಸಹಕಾರ ನೀಡುವುದು ಅವಶ್ಯಕ.

– ಎಸ್.ಆರ್. ಸತೀಶಚಂದ್ರ
ಅಧ್ಯಕ್ಷರು

# ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರ ಸಂಸ್ಥೆಗಳಿಗೆ ಮಾರಕ – ಬೃಹತ್ ಸಮಾವೇಶ






ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರ ಸಂಸ್ಥೆಗಳಿಗೆ ಮಾರಕವಾಗುವ ಪರಿಚ್ಛೇದ ಕೈ ಬಿಡುವಂತೆ ಒತ್ತಾಯಿಸಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಕ್ರೆಡಿಟ್ ಸಹಕಾರ ಸಂಸ್ಥೆಗಳ ಬೃಹತ್ ಸಮಾವೇಶ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳು

ಸಹಕಾರ ಸಂಸ್ಥೆಗಳಿಗೆ ತೆರಿಗೆ ಸಲ್ಲದೆಂದು ದಿನಾಂಕ 27/12/2011 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರ ಸಂಸ್ಥೆಗಳಿಗೆ ಮಾರಕವಾಗುವ ಪರಿಚ್ಛೇದಗಳನ್ನು ಕೈ ಬಿಡುವಂತೆ ಹಾಗೂ ಈ ಮೊದಲ 80ಪಿ ಪರಿಚ್ಛೇದವನ್ನು ಉಳಿಸಿಕೊಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ನಡೆದ ಕ್ರೆಡಿಟ್ ಸಹಕಾರ ಸಂಸ್ಥೆಗಳ ಬೃಹತ್ ಸಮಾವೇಶವನ್ನು ಕೇಂದ್ರದಲ್ಲಿ ರಾಜ್ಯದ ಪ್ರತಿನಿಧಿ ಹಾಗೂ ಕೇಂದ್ರದ ಮಾಜಿ ರಾಜ್ಯ ಹಣಕಾಸು ಸಚಿವ ಶ್ರೀ ಧನಂಜಯಕುಮಾರರವರು ಉದ್ಘಾಟಿಸಿ ಸಹಕಾರ ಸಂಸ್ಥೆಗಳು ಶ್ರೀ ಸಾಮಾನ್ಯನ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯ ಮಹತ್ವದ ಸಾಧನವಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಮೇಲೆ ತೆರಿಗೆ ಸಲ್ಲದು ಎಂದು ತಿಳಿಸಿ ಈ ಬಗ್ಗೆ ಕೇಂದ್ರದಲ್ಲಿ ಸಂಬಂಧಿಸಿದವರಲ್ಲಿ ಮಾತಾಡಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಪ್ರಾರಂಭದಲ್ಲಿ ಅಸೋಸಿಯೇಶನ್ ಅಧ್ಯಕ್ಷರಾದ ಶ್ರೀ ರಾವಸಾಹೇಬ ಅ ಪಾಟೀಲ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗುರುನಾಥ ಜ್ಯಾಂತಿಂಕರ ಪ್ರಾಸ್ತಾವಿಕ ಭಾಷಣ ಮಾಡಿದರು.

ಅಧ್ಯಕ್ಷರ ಭಾಷಣ ಮಾಡಿದ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವಗೌಡರವರು ಸಹಕಾರಿ ಸಂಸ್ಥೆಗಳು ಈ ದೇಶದ ರೈತರ, ಸಾಮಾನ್ಯ ಜನರ ಅಭಿವೃದ್ಧಿಯಲ್ಲಿ ವಹಿಸಿರುವ ಪಾತ್ರ ಅತ್ಯಂತ ಮಹತ್ವದ್ದು. ಈ ಸಾಧನೆಗಳನ್ನು ಕೇಂದ್ರ ಸರ್ಕಾರ ಹಾಗೂ ಸಂಬಂಧಿಸಿದವರೆಲ್ಲಿ ಒಂದು ಬಾರಿ ನೋಡಬೇಕು. ಈ ಸೇವೆ ಅತಿ ಅಮೂಲ್ಯವಾದುದು ಆದುದರಿಂದ ಸಹಕಾರಿ ಕ್ಷೇತ್ರವನ್ನು ತೆರಿಗೆ ಮುಕ್ತವೆಂದು ಘೋಷಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಎಂ. ಮಂಜುನಾಥ ಗೌಡರವರು, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

1) ಕೇಂದ್ರ ಸರ್ಕಾರವು ದಿನಾಂಕ:1/4/2012ರಿಂದ ಜಾರಿಗೆ ತರಲು ಉದ್ದೇಶಿಸಿರುವ ನೇರ ತೆರಿಗೆ ಪದ್ಧತಿ ಕಾಯ್ದೆಯು ಕ್ರೆಡಿಟ್ ಸಹಕಾರ ಸಂಘಗಳ ಅಭಿವೃದ್ಧಿಗೆ ಮಾರಕವಾಗಲಿರುವುದರಿಂದ ಈ ಕಾಯ್ದೆಯಲ್ಲಿ ಕ್ರೆಡಿಟ್ ಸಹಕಾರ ಸಂಘಗಳಿಗೆ ಅನ್ವಯಿಸುವ ಪರಿಚ್ಛೇದಗಳನ್ನು ಕೈಬಿಟ್ಟು ಮೊದಲಿನಂತೆ 80ಪಿ ಪರಿಚ್ಛೇದವನ್ನು ಮುಂದುವರೆಸುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸಿಕೊಳ್ಳುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು.

ಕೇಂದ್ರದ ಮಾನ್ಯ ಪ್ರಧಾನ ಮಂತ್ರಿಗಳಿಗೆ, ಹಣಕಾಸು ಸಚಿವರಿಗೆ ಹಾಗೂ ಹಣಕಾಸು ಆಯೋಗದ ಅಧ್ಯಕ್ಷರಿಗೆ ವಿಷಯದ ಬಗ್ಗೆ ವಿವರಣೆ ನೀಡಿ ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ತೊಂದರೆಯಾಗದಂತೆ 80ಪಿ ಪರಿಚ್ಛೇದವನ್ನು ಮುಂದುವರೆಸುವಂತೆ ಆಗ್ರಹಿಸಿ, ವಿಧಾನ ಮಂಡಳದ ಪ್ರಸ್ತುತ ಅಧಿವೇಶನದಲ್ಲಿ ನಿರ್ಣಯವನ್ನು ಅಂಗೀಕರಿಸಿ ಕೇಂದ್ರ ಸರ್ಕಾಕ್ಕೆ ಕಳುಹಿಸಲು ಕ್ರಮವಿಡುವಂತೆ ಮಾನ್ಯ ಮುಖ್ಯ ಮಂತ್ರಿಗಳನ್ನು ಹಾಗೂ ಸಹಕಾರ ಸಚಿವರನ್ನು ವಿನಂತಿಸುವುದೆಂದು ನಿರ್ಣಯಿಸಲಾಯಿತು ಹಾಗೂ ಪತ್ರ ಮುಖೇನ ಈ ಬಗ್ಗೆ ಕೇಂದ್ರ ಹಣಕಾಸು ಸಚಿವರನ್ನು ಹಾಗೂ ಕೇಂದ್ರ ಹಣಕಾಸು ಆಯೋಗದ ಅಧ್ಯಕ್ಷರನ್ನು ನಿಯೋಗದೊಂದಿಗೆ ಹೋಗಿ ಬೇಟಿಮಾಡಿ ಮನವಿ ಪತ್ರ ಸಲ್ಲಿಸಲು ರಾಜ್ಯದ ಸಂಸದರು ಸಹಕರಿಸುವಂತೆ ಅವರನ್ನು ವಿನಂತಿಸುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು. ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳನ್ನು, ಸಹಕಾರ ಸಚಿವರನ್ನು, ರಾಜ್ಯದ ಎಲ್ಲ ಲೋಕಸಭಾಸದಸ್ಯರನ್ನು ವಿನಂತಿಸುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು.

2) ಕ್ರೆಡಿಟ್ ಸಹಕಾರ ಸಂಘಗಳಿಗೆ ರೂ. 50.000ಗಳವರೆಗೆ ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್‌ಗೆ

## ಕ್ರೆಡಿಟ್ ಸೊಸೈಟಿಗಳ ಯಶಸ್ವಿ ಸಮಾವೇಶ ನಿರ್ಣಯಗಳು

1) ನೇರ ತೆರಿಗೆ ಪದ್ಧತಿಯಲ್ಲಿ ಸಹಕಾರ ಸಂಸ್ಥೆಗಳಿಗೆ ಮಾರಕವಾಗುವ ಪರಿಚ್ಛೇದಗಳನ್ನು ಕೈಬಿಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು.
2) ಮೂರನೇ ವ್ಯಕ್ತಿಯ ಚೆಕ್ (ಥರ್ಡ್ ಪಾರ್ಟಿ ಚೆಕ್) ನಗದಿಕರಣದ ಮಿತಿ ಕೈ ಬಿಡುವಂತೆ ಒತ್ತಾಯಿಸುವುದು.
3) ಆದಾಯ ತೆರಿಗೆ ಕಾಯ್ದೆಯ ಪರಿಚ್ಛೇದ 269ಎಸೆಸ್ ಹಾಗೂ 269ಟಿ ಪ್ರಕಾರ ರೂ. 20.000 ನಗದು ವ್ಯವಹಾರದ ಮಿತಿಯನ್ನು ಕೈಬಿಡುವುದು.
4) ಸಹಕಾರಿ ಸಂಸ್ಥೆಗಳ ಪಿಗ್ಮಿ ಏಜೆಂಟರಿಗೆ ನೀಡುವ ಕಮಿಷನ್ ಮೇಲಿನ ಟಿಡಿಎಸ್ ತೆರಿಗೆಯನ್ನು ರದ್ದು ಪಡಿಸಲು ಒತ್ತಾಯಿಸುವ ಕುರಿತು.
5) ಸಹಕಾರ ಶಿಕ್ಷಣ ನಿಧಿ ಪಾವತಿ ಕುರಿತಂತೆ ಹಾಗೂ ಇನ್ನೂ ಅನೇಕ ಕಲಂಗಳಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಅವಶ್ಯಕ ತಿದ್ದು ಪಡಿಗಳನ್ನು ಶೀಘ್ರದಲ್ಲಿ ಜಾರಿಗೆ ಕೊಡುವ ಕುರಿತು.
6) ಕೇಂದ್ರದ ಬಹುರಾಜ್ಯ ಸಹಕಾರಿ ಕಾಯ್ದೆಗೆ ಸಹಕಾರಿಗಳ ಸ್ವಾಯತ್ತತೆಗೆ ಕಡಿವಾಣ ಹಾಕುವ ಉದ್ದೇಶಿತ ತಿದ್ದುಪಡಿಗಳನ್ನು ರದ್ದು ಪಡಿಸುವಂತೆ ಕೋರುವುದು.
7) ಪ್ರತಿ ಕಂದಾಯ ಜಿಲ್ಲೆಗೊಂದು ಸಹಕಾರಿ ನ್ಯಾಯಾಲಯ ಸ್ಥಾಪಿಸಲು ಆಗ್ರಹಿಸುವುದು.
8) ಸಹಕಾರ ವಿಶ್ವ ವಿದ್ಯಾಲಯ ಸ್ಥಾಪಿಸಲು ಆಗ್ರಹಿಸುವುದು.
9) ಪ್ರತಿ ಕಂದಾಯ ಜಿಲ್ಲೆಗೊಂದು ಸಹಕಾರ ಭವನವನ್ನು ಸ್ಥಾಪಿಸುವ ಕುರಿತು.
10) ರಾಜ್ಯ ಮಟ್ಟದಲ್ಲಿ ಸಹಕಾರ ಅಭಿವೃದ್ಧಿ/ಪ್ರತಿಷ್ಠಾನ ರಚನೆಗೆ ಆಗ್ರಹಿಸುವುದು.
11) ಸಹಕಾರ ನೀತಿ ಜಾರಿಗೆ ತರಲು ಒತ್ತಾಯಿಸುವ ಕುರಿತು.
12) ಸಾಲ ವಸೂಲಾತಿ ನೀತಿಯನ್ನು ಶೀಘ್ರ ಜಾರಿಗೆ ತರಲು ಒತ್ತಾಯಿಸುವ ಕುರಿತು.

ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಇವರನ್ನು ಅಭಿನಂದಿಸಲಾಯಿತು. ಜೊತೆಗೆ ಈ 50.000 ರೂಪಾಯಿಗಳ ಮಿತಿ ಇರುವುದರಿಂದ ಕ್ರೆಡಿಟ್ ಸಹಕಾರ ಸಂಘಗಳಿಗೆ ಹೆಚ್ಚಿನ ಮೊತ್ತದ ಚೆಕ್‌ಗಳನ್ನು ಸ್ವೀಕರಿಸಿ ಕಲೆಕ್ಷನ್ ಮಾಡಲು ತೊಂದರೆಯಾಗಿರುವುದರಿಂದ ಸದರಿ ಮಿತಿಯನ್ನು ಕೈ ಬಿಡುವಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರನ್ನು ವಿನಂತಿಸುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು. ಹಾಗೂ ಈ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿ-ಯಾದ ಅಧಿಕಾರಿಗಳನ್ನು ಖುದ್ದಾಗಿ ಬೇಟಿಮಾಡಿ ವಿಷಯವನ್ನು ವಿವರಿಸಿ ಚರ್ಚಿಸಿ ಅವರನ್ನು ಮನ ಒಲಿಸಲು ಕ್ರಮವಿಡಲು ಕರ್ನಾಟಕ ಸ್ಟೇಟ್ ಕ್ರೆಡಿಟ್ ಸೊಸೈಟೀಸ್ ಅಸೋಶಿಯೇಶನ್ ಪದಾಧಿಕಾರಿಗಳಿಗೆ ಅಧಿಕಾರ ನೀಡುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು.

3) ಸಹಕಾರಿ ಸಂಸ್ಥೆಗಳಲ್ಲಿ ಪಿಗ್ಮಿ ಏಜೆಂಟರಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅವರ ದೊರಕುವ ಕಮಿಷನ್‌ನಲ್ಲಿ ಟಿಡಿಎಸ್‌ನ್ನು ವಿಧಿಸಲಾಗುತ್ತಿದೆ. ಇದು ಈ ವರ್ಗದ ಜನರಿಗೆ ಕಾರ್ಯನಿರ್ವಹಿಸುವಲ್ಲಿ ಒನದು ರೀತಿಯ ಹಿನ್ನಡೆಯಾಗಲು ಅವಕಾಶವಾಗಿದೆ. ಇದರಿಂದಾಗಿ ಸಹಕಾರಿ ಸಂಸ್ಥೆಗಳ (ಲೋ-ಕಾಸ್ಟ್ ಡಿಪಾಸಿಟ್) ಕಡಿಮೆ ಬಡ್ಡಿ ದರದ ಠೇವಣಿ ಸಂಗ್ರಹಣೆಗೂ ಹಿನ್ನಡೆಯಾಗುತ್ತಿದೆ. ಆದರಿಂದ ಪಿಗ್ಮಿ ಏಜೆಂಟರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮತ್ತು ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಬಡ್ಡಿ ದರದ ಠೇವಣಿ ಸಂಗ್ರಹಿಸಲು ಅವಕಾಶವಾಗುವ ದೃಷ್ಟಿಯಿಂದ ಪಿಗ್ಮಿ ಏಜೆಂಟರ್‌ಗಳಿಗೆ ನೀಡುವ ಕಮಿಷನ್ ಮೇಲಿನ ಟಿಡಿಎಸ್ ರದ್ದು ಪಡಿಸಲು ಕೇಂದ್ರ ಸರ್ಕಾರವನ್ನು ಮತ್ತು ಹಣಕಾಸು ಸಚಿವರನ್ನು ವಿನಂತಿಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

4) ಆದಾಯ ತೆರಿಗೆ ಕಾಯ್ದೆಯ ಪರಿಚ್ಛೇದ 269ಎಸೆಸ್ ಹಾಗೂ 269ಟಿ ಪ್ರಕಾರ ರೂ. 20.000 ನಗದು ವ್ಯವಹಾರದ ಮಿತಿ ಸಹಕಾರಿ ಸಂಸ್ಥೆಗಳಿಗೆ ತುಂಬಾ ಅನಾನುಕೂಲವಾಗುತ್ತಿದ್ದು, ಈ ಬಗ್ಗೆ ರಾಜ್ಯ ಸರ್ಕಾರ ಹಾಗೂ ಸಹಕಾರಿ ಇಲಾಖೆಯ ಮುಖಾಂತರ ಸಂಬಂಧಿಸಿದವರೊಡನೆ ಪತ್ರ ಬರೆದು ಸಮಸ್ಯೆ ಬಗೆಹರಿಸುವಲ್ಲಿ ಕ್ರಮವಿಡುವಂತೆ ವಿನಂತಿಸುವುದೆಂದು ಹಾಗೂ ಇದನ್ನು ಕೈ ಬಿಡುವಂತೆ ಕೇಂದ್ರದ ಹಣಕಾಸು ಸಚಿವರನ್ನು, ಹಣಕಾಸು ಆಯೋಗದ ಅಧ್ಯಕ್ಷರನ್ನು ರಾಜ್ಯ ಸರ್ಕಾರದ ಮುಖಾಂತರ ವಿನಂತಿಸುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು.

5) ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಸಹಕಾರ ಶಿಕ್ಷಣ ನಿಧಿ ಪಾವತಿ ಮೊತ್ತದ ಪ್ರಮಾಣ 3%ಇರುತ್ತದೆ. ಆದರೆ 1959ರ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘಗಳಿಗೆ ಲಾಭಾಂಶದಲ್ಲಿ 2% ಮಾತ್ರ ಇರುತ್ತದೆ. ಹೀಗಾಗಿ ಸಹಕಾರ ಶಿಕ್ಷಣ ನಿಧಿ ಪಾವತಿಸುವಲ್ಲಿ ಸೌಹಾರ್ದ ಸಹಕಾರಿಗಳಿಗೆ 1% ಹೆಚ್ಚಿನ ಹೊರೆಯಾಗಿದೆ. ಇದನ್ನು ಶೀಘ್ರದಲ್ಲಿ ತಿದ್ದುಪಡಿಮಾಡಿ ಎರಡು ಕಾಯ್ದೆಯಲ್ಲಿಯೂ ಒಂದೇ ತರನಾದ ಸಹಕಾರ ಶಿಕ್ಷಣ ನಿಧಿ ಪಾವತಿಗೆ ಅವಕಾಶವಾಗುವಂತೆ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದು ಪಡಿ ಜಾರಿಗೆ ತರಲು ಈ ಸಮಾವೇಶ ಸರ್ವಾನು ಮತದಿಂದ ನಿರ್ಣಯಿಸಲಾಯಿತು.

6) ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿದ್ದು ಹಾಲಿ ವ್ಯವಸ್ಥೆಯಲ್ಲಿ ವ್ಯಾಜ್ಯಗಳ ತೀರ್ಮಾನ ತುಂಬ ವಿಳಂಬವಾಗುತ್ತಿದ್ದು, ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸುವುದು ಅಗತ್ಯವಾಗಿರುವ ಹಿನ್ನಲೆಯಲ್ಲಿ ಪ್ರತಿ ಕಂದಾಯ ಜಿಲ್ಲೆಗೊಂದು ಜಿಲ್ಲಾ ಸಹಕಾರಿ ನ್ಯಾಯಾಲಯ ಸ್ಥಾಪಿಸಲು ಕ್ರಮವಿಡುವಂತೆ ಕರ್ನಾಟಕ ಸರ್ಕಾರವನ್ನು ಹಾಗೂ ಸಹಕಾರಿ ಇಲಾಖೆಯನ್ನು ವಿನಂತಿಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

7) ಭಾರತದ ಸಹಕಾರ ಚಳುವಳಿಗೆ 107 ವರ್ಷಗಳ ಇತಿಹಾಸವಿದ್ದು, ಸಹಕಾರಿ ಕ್ಷೇತ್ರದ ಮೂಲಕ ಆರ್ಥಿಕ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿರುವುದಲ್ಲದೆ, ಈ ದೇಶದಲ್ಲಿ ಹಸಿರು ಕ್ರಾಂತಿ ಹಾಗೂ ಕ್ಷೀರ ಕ್ರಾಂತಿಗಳ ಹರಿಕಾರನಾಗಿ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿರುವ ಈ ಸಹಕಾರ ಕ್ಷೇತ್ರದ ಸಾಧನೆಯನ್ನು ಗಮನಿಸಿ ವಿಶ್ವಸಂಸ್ಥೆಯವರು 2012ನ್ನ ಅಂತರಾಷ್ಟ್ರೀಯ ವರ್ಷವನ್ನಾಗಿ ಘೋಷಣೆ ಮಾಡಿರುವುದು ನಮ್ಮ ದೇಶದ ಹೆಮ್ಮೆ. ಇಂತಹ ಬೃಹತ್ ಸಹಕಾರಿ ಚಳುವಳಿಯು ಅಧ್ಯಯನ ಯೋಗ್ಯವಾಗಿವೆ. ಇದಕೋಸ್ಕರ ಒಂದು ವಿಶ್ವವಿದ್ಯಾಲಯದ ಅಗತ್ಯತೆ ಇದೆ. ಕರ್ನಾಟಕ ರಾಯ ಸಹಕಾರ ಮಹಾಮಂಡಳದಿಂದ ಈ ವಿಶ್ವವಿದ್ಯಾಲಯದ ಸ್ಥಾಪನೆಯ ಬಗ್ಗೆ ಪ್ರಸ್ತಾವನೆಯು ರಾಜ್ಯ ಸರ್ಕಾರದ ಪರಿಶೀಲನೆ ಹಂತದಲ್ಲಿದ್ದು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ವಿನಂತಿಸುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು.

8) ರಾಜ್ಯದಲ್ಲಿ ಸಹಕಾರ ಸಂಘಗಳ ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಅವಶ್ಯಕವಾಗಿರುವ ಸಾಲ ವಸೂಲಾತಿ ನೀತಿಯನ್ನು ಶೀಘ್ರದಲ್ಲಿ ಜಾರಿಗೆ ತರಲು ಕರ್ನಾಟಕ ಸರ್ಕಾರವನ್ನು ಒತ್ತಾಯಿಸುವುದೆಂದು ಸರ್ವಾನು ಮತದಿಂದ ನಿರ್ಣಯಿಸಲಾಯಿತು.



9) ರಾಜ್ಯದಲ್ಲಿ ಸಹಕಾರಿ ಚಳುವಳಿ ಬೃಹದಾಕಾರವಾಗಿ ಬೆಳೆದಿದೆ. ರಾಜ್ಯದಲ್ಲಿ ಎಲ್ಲ ವಿಧವಾದ ಸಹಕಾರ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಆರ್ಥಿಕ ಸಾಮಾಜಿಕ ಅಭಿವೃದ್ಧಿಗೆ ಈ ಕ್ಷೇತ್ರದಿಂದ ಸಾಕಷ್ಟು ನೆರವುದೊರಕಿದೆ. ಈ ಕ್ಷೇತ್ರದಲ್ಲಿ ಸಮಸ್ಯೆಗಳು ಹಲವಾರು ಇವೆ.

ಈ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಸಹಕಾರಿ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆಯಾದರೂ! ಸಮಸ್ಯೆಗಳ ಬಗ್ಗೆ ಹಾಗೂ ಪರಿಹಾರಗಳ ಬಗ್ಗೆ ಹಿರಿಯ ಸಹಕಾರಿಗಳೊಡನೆ ಸಮರ್ಪಕ ವ್ಯಾಪಕ ಚರ್ಚೆಗಳು ನಡೆಯುತ್ತಿಲ್ಲ, ಸಮಾಲೋಚನೆಗಳು ನಡೆಯುತ್ತಿಲ್ಲ, ಕೇವಲ ಅಧಿಕಾರಿಗಳ ಸಲಹೆ ಮೇರೆಗೆ ನಿರ್ಣಯಗಳು ಜಾರಿ ಯಾಗುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಹೆಚ್ಚಿನ ಮಾನ್ಯತೆ ನೀಡಿದ್ದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಾಧ್ಯ ವಿರುವಂತೆ ಸಹಕಾರ ಕ್ಷೇತ್ರದಲ್ಲಿಯೂ ಹಿರಿಯ ಸಹಕಾರಿಗಳ/ಸಹಕಾರಿ ಮುಖಂಡರ ಅನುಭವದ ಸಲಹೆ ಸಹಕಾರ ಮಾರ್ಗದರ್ಶನ ಅಗತ್ಯವಿರುತ್ತದೆ. ಈ ಹಿನ್ನಲೆಯಲ್ಲಿ ರಾಜ್ಯದಲ್ಲಿ ಸಹಕಾರ ಅಭಿವೃದ್ಧಿ ಪ್ರತಿಷ್ಠಾನ (ಕೋ- ಆಪರೇಟಿವ್ ಡೆವೆಲಪ್‌ಮೆಂಟ್ ಕೌನ್ಸಿಲ್) ಸ್ಥಾಪಿಸುವುದು ಅಗತ್ಯವೆಂದು ಈ ಸಮಾವೇಶವು ಭಾವಿಸುತ್ತದೆ. ಹಾಗೂ ಈ ಬಗ್ಗೆ ಕ್ರಮವಿಡಲು ಕರ್ನಾಟಕ ಸರ್ಕಾರ ಹಾಗೂ ಸಹಕಾರಿ ಸಚಿವರನ್ನು ವಿನಂತಿಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

10) ರಾಜ್ಯದ ಸಹಕಾರಿ ಚಳುವಳಿ ನಡೆಯ ಬೇಕಾದ ದಾರಿ, ನಿರ್ವಹಿಸಬೇಕಾದ ಕಾರ್ಯಗಳು ಸೇರಿದಂತೆ ಸಹಕಾರಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಹಕಾರ ನೀತಿ ಅವಶ್ಯಕತೆ ಇದೆ. ರಾಷ್ಟ್ರದಲ್ಲೇ ಸಹಕಾರ ನೀತಿಯನ್ನು ನಿರೂಪಿಸಿದ ಪ್ರಥಮ ರಾಜ್ಯವೆಂಬ ಹೆಗ್ಗಳಿಕೆ ಕರ್ನಾಟಕದಾಗಿದೆತಾದರೂ ಆ ಸಹಕಾರ ನೀತಿ ಇದುವರೆಗೆ ಜಾರಿಗೊಳ್ಳದೇ ಇರುವುದನ್ನು ಸಮಾವೇಶವು ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ಕೂಡಲೇ ಕ್ರಮವಿಡುವಂತೆ ಕರ್ನಾಟಕ ಸರ್ಕಾರವನ್ನು ಹಾಗೂ ಸಹಕಾರ ಸಚಿವರನ್ನು ವಿನಂತಿಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

11) ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆ ಕುರಿತು ಸಾಧನೆಗಳ ಕುರಿತು ಸಮಸ್ಯೆಗಳ ಹಾಗೂ ಪರಿಹಾರಗಳ ಚರ್ಚಿಸುವ ಕುರಿತು ಹಾಗೂ ಸಭೆ ಸಮಾರಂಭಗಳನ್ನು ನಡೆಸುವುದಕ್ಕಾಗಿ ಸಹಕಾರ ಭವನದ ಅಗತ್ಯವಿದ್ದು, ಪ್ರತಿ ಜಿಲ್ಲೆಯಲ್ಲೂ ಈ ಸಹಕಾರ ಭವನದ ನಿರ್ಮಾಣಕ್ಕಾಗಿ ಅಗತ್ಯವೆನಿಸುವ ನಿವೇಶನ (80ಥ100) ಹಾಗೂ ಕಟ್ಟಡ ನಿರ್ಮಾಣಕ್ಕಾಗಿ 50.00000 ರೂ ಗಳ ಸಹಾಯ ಧನವನ್ನು ಮಂಜೂರು ಮಾಡುವಂತೆ ರಾಜ್ಯ ಸರ್ಕಾರವನ್ನು ವಿನಂತಿಸುವುದೆಂದು ಸರ್ವಾನುಮತದಿಂದ ನಿರ್ಣಯಿಸಲಾಯಿತು.

12) ಸಹಕಾರ ಚಳುವಳಿ ಜನ ಸಾಮಾನ್ಯರ ಆರ್ಥಿಕ ಅಭಿವೃದ್ಧಿಗಾಗಿ ಇರುವ ಚಳುವಳಿ. ಈ ಚಳುವಳಿಯು ಸರ್ಕಾರದ ಅತಿಯಾದ ಹಸ್ತಕ್ಷೇಪದಿಂದ ನಿರೀಕ್ಷಿತ ಸಾಧನೆ ಮಾಡಲಾಗಿಲ್ಲವೆಂದು ಅರ್ಧನಾರೀಶ್ವರ ಸಮಿತಿ ಶಿಫಾರಸ್‌ನಂತೆ ಯೋಜನಾ ಆಯೋಗದವರು ಸಿದ್ಧಪಡಿಸಿದ ಮಾದರಿ ಕಾಯ್ದೆಗನುಗುಣವಾಗಿ ಹಾಗೂ ಪ್ರೊ॥ ವೈದ್ಯನಾಥನ್ ಸಮಿತಿ ಶಿಫಾರಸ್‌ನಂತೆ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಸ್ವಾಯತ್ತತೆಯನ್ನು ಸರ್ಕಾರಗಳು ನೀಡುತ್ತಿರುವಾಗ ಕೇಂದ್ರದ ಬಹು ರಾಜ್ಯ ಸಹಕಾರಿ ಕಾಯ್ದೆಗೆ ತಿದ್ದುಪಡಿಮಾಡಿ ಸಹಕಾರಿಗಳ ಸ್ವಾಯತ್ತತೆಗೆ ಕಡಿವಾಣ ಹಾಕುತ್ತಿರುವುದು ಸಹಕಾರಿಗಳು ಯೋಚಿಸಬೇಕಾದ ಬಹು ಗಂಭೀರವಾದ ವಿಷಯವೆಂದು ಸಮಾವೇಶವು ಅಭಿಪ್ರಾಯಪಡುತ್ತದೆ. ಹಾಗೂ ಈ ಬಗ್ಗೆ ಕೂಡಲೇ ಕೇಂದ್ರಕ್ಕೆ ಮನವಿಸಲ್ಲಿಸಿ ಉದ್ದೇಶಿತ ತಿದ್ದು ಪಡಿಗಳನ್ನು ಕೈಬಿಡುವಂತೆ ಹಾಗೂ ಸಹಕಾರಿಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡಿ ಸಹಕಾರಿ ಕ್ಷೇತ್ರವನ್ನು ಪ್ರೋತ್ಸಾಹಿಸಲು ಕ್ರಮವಿಡಬೇಕೆಂದು ವಿನಂತಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. ■

# ಉಡುಪಿಯ ಶ್ರೀ ಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಹೊಸ ಶಾಖೆ ಉದ್ಘಾಟನೆ


ದಶಮಾನೋತ್ಸವದ ಸಮಾರಂಭದ ಭಾವಚಿತ್ರ


ಹೊಸ ಶಾಖೆ ಉದ್ಘಾಟನೆಯ ಭಾವಚಿತ್ರ

ಉಡುಪಿ: ದಿನಾಂಕ:10-12-2011 ರಂದು ಮಾರುತಿ ವೀಥಿಕಾದಲ್ಲಿರುವ ಸಾಯಿ ಗಣೇಶ್ ಸೌಹಾರ್ದ ಸಹಕಾರಿ ಸಂಘದ ದಶಮಾನೋತ್ಸವದ ಪ್ರಯುಕ್ತ ನೂತನ ಶಾಖೆಯನ್ನು ಚಿತ್ತರಂಜನ್ ಸರ್ಕಲ್ ಬಳಿಯ ಶ್ಯಾಮಲಾ ಆರ್ಕೇಡ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳ ಮೀನು ಮಾರಾಟ ಫೆಡರೇಶನ್ ಅಧ್ಯಕ್ಷರಾದ ಶ್ರೀ ಯಶ್ಪಲ್ ಸುವರ್ಣ ಅವರು ದೀಪ ಬೆಳಗಿಸಿ, ಸಂಸ್ಥೆಯು ಕ್ಷಿಪ್ರ ಅವಧಿಯಲ್ಲಿ ಮುನ್ನಡೆ ಸಾದಿಸಿಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ್ ಕಾಮತ್, ಸಂಸ್ಥೆ ಅಧ್ಯಕ್ಷರಾದ ಹಾಗೂ ಮಹಾ ಪ್ರಬಂಧಕ ಶ್ರೀ ಎಚ್. ಆರ್. ಶೆಣೈ, ಹಿರಿಯ ಪ್ರಬಂಧಕ ಶ್ರೀ ಆರ್. ಪೈ, ನಿರ್ದೇಶಕರಾದ ಶ್ರೀಮತಿ ಮೀರಾ ಆರ್. ಶೆಣೈ, ಶ್ರೀ ಪಿ. ಗುರುದಾಸ್ ಶೆಣೈ, ಶ್ರೀ ದೇವ್‌ದಾಸ್ ಕಾಮತ್, ಶ್ರೀ ಎಚ್.ಪಿ.ಶೆಣೈ, ಶ್ರೀ ದಿನೇಶ್ ಮೊದಲಾದವರು ಉಪಸ್ಥಿತರಿದ್ದರು.

# ಸಂವಿಧಾನ 111ನೇ ತಿದ್ದುಪಡಿ : ಸಹಕಾರಿ ಸಂಸ್ಥೆಗಳನ್ನು ರಚಿಸುವುದು ಸಂವಿಧಾನಾತ್ಮಕ ಹಕ್ಕು

ಕೇಂದ್ರ ಕೃಷಿ ಸಚಿವ ಶ್ರೀ ಶರದ್ ಪವಾರರವರು ನವೆಂಬರ್ 30 2009ರಲ್ಲಿ ತಿದ್ದುಪಡಿಯನ್ನು ಮಂಡಿಸಿದ್ದರು. ಸಾರಾಂಶಗಳು ಈ ಕೆಳಕಂಡತಿವೆ. ಈ ತಿದ್ದುಪಡಿಯ (ರಾಜ್ಯ ಸಕಾರಗಳು ಸಹಕಾರ ಸಂಸ್ಥೆಗಳ ರಚನೆಗೆ ಪೂರ್ಣ ಸ್ವಾಯತ್ತತೆ ನೀಡುವುದು, ಪ್ರಜಾಸತ್ತಾತ್ಮಕ ಹಾಗೂ ವೃತ್ತಿಪರ ಆಡಳಿತ ನೀಡುವುದನ್ನು ಪ್ರೋತ್ಸಾಹಿಸಬೇಕು ಸಹಕಾರ ಸಂಸ್ಥೆಗಳ ಆಡಳಿತ ವ್ಯವಸ್ಥೆಗೆ ಮಾರ್ಗದರ್ಶಿ ಸೂತ್ರಗಳನ್ನು ರಚಿಸಬೇಕು.)

ಸಹಕಾರ ಸಂಸ್ಥೆಗಳ ಲೆಕ್ಕಪರಿ ಶೋಧನೆಗೆ ಹಾಗೂ ಚುನಾವಣೆ ನಿಗದಿತ ಸಮಯದಲ್ಲಿ ನಡೆಯಬೇಕು. ರಾಜ್ಯ ಸರ್ಕಾರಗಳು ಈ ಬಗ್ಗೆ ಮಾರ್ಗದರ್ಶಿ ಸೂತ್ರಗಳನ್ನು ರಚಿಸಬೇಕು. ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯ ಸಂಖ್ಯೆಯು ಮಿತಿ 21ಕ್ಕೆ ಮೀರದಂತೆ ರಾಜ್ಯ ಸರಕಾರಗಳ ಸಂಖ್ಯೆಯ ಮಿತಿಯನ್ನು ನಿಗದಿ ಪಡಿಸಬೇಕು. ಆಡಳಿತ ಸಮಿತಿಯಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ, ವರ್ಗದವರಿಗೆ ಹಾಗೂ ಎರಡು ಸ್ಥಾನಗಳನ್ನು ಮಹಿಳೆಯರಿಗೆ ಕಾಯ್ದಿರಿಸಬೇಕು. ಸಹಕಾರ ಸಂಸ್ಥೆಗಳು ನಿರಂತರವಾಗಿ ಸುಸ್ತಿದಾರನಾಗಿದ್ದರೆ, ನಿರಂತರವಾಗಿ ಬೇಜವಾಬ್ದಾರನಾಗಿ ವರ್ತಿಸುತ್ತಿದ್ದರೆ ಸದಸ್ಯರ ಹಿತಕ್ಕೆ ಬಾಧೆ ತರುವಂತಹ ಕಾರ್ಯನಿರ್ವಹಿಸುತ್ತಿದ್ದರೆ ಕಾನೂನು ಮತ್ತು ನಿಯಮಗಳ ಪ್ರಕಾರ ಆಡಳಿತ ಮಂಡಳಿ ಚುನಾವಣೆ ನಡೆಸಿರದಿದ್ದರೆ ಆಡಳಿತ ಮಂಡಳಿಯನ್ನು ರದ್ದು ಮಾಡಲು ಕ್ರಮವಿಡುವುದು. ಸರ್ಕಾರ ಪಾಲುಗಾರಿಕೆ ಅಥವಾ ನೆರವು ಇಂದ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯನ್ನು ರದ್ದು ಮಾಡಲಾಗದು. ಈ ತಿದ್ದುಪಡಿಗಳು ದಿನಾಂಕ 28/12/2011ರಂದು ಅನುಮೋದನೆಯಾಗಿದೆ ಎಂದು ವರದಿಯಾಗಿದೆ.

## ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ ಪಾವತಿ ಪರಿಷ್ಕರಣೆಗೆ ಅನುಮೋದನೆ

ಸಂಯುಕ್ತ ಸಹಕಾರಿಯ ಉಪವಿಧಿಗಳ ತಿದ್ದುಪಡಿಯು ದಿನಾಂಕ24/8/2011 ರಂದು ವಾರ್ಷಿಕ ಮಹಾ ಸಭೆಯಲ್ಲಿ ಅನುಮೋದನೆಗೊಂಡ ನಂತರ ಸಹಕಾರ ಸಂಘಗಳ ನಿಬಂಧಕರ ಅನುಮೋದನೆಯನ್ನು ದಿನಾಂಕ : 03-12-2011ರಂದು ಅನುಮೋದನೆ ನೀಡಿದ್ದಾರೆ. ಅದರ ಸೌಹಾರ್ದ ಸಹಕಾರಿಗಳು ಇನ್ನು ಮುಂದೆ ಈ ಕೆಳ ಕಂಡ ಪ್ರಮಾಣದಂತೆ ವಾರ್ಷಿಕ ಶುಲ್ಕ ಪಾವತಿಸಬೇಕಾಗುತ್ತದೆ.

| ಸಂಖ್ಯೆ | ದುಡಿಯುವ ಬಂಡವಾಳ (ರೂ.ಗಳು) | ವಾರ್ಷಿಕ ಶುಲ್ಕ ರೂಗಳಲ್ಲಿ |
|---|---|---|
| 1. | 5 ಲಕ್ಷಕ್ಕಿಂತ ಕಡಿಮೆ | 250 |
| 2. | 5 ಲಕ್ಷಕ್ಕಿಂತ ಹೆಚ್ಚು 10 ಲಕ್ಷಕ್ಕಿಂತ ಕಡಿಮೆ | 500 |
| 3. | 10 ಲಕ್ಷಕ್ಕಿಂತ ಹೆಚ್ಚು 30 ಲಕ್ಷಕ್ಕಿಂತ ಕಡಿಮೆ | 1000 |
| 4. | 30 ಲಕ್ಷಕ್ಕಿಂತ ಹೆಚ್ಚು 1 ಕೋಟಿಗಿಂತ ಕಡಿಮೆ | 2000 |
| 5. | 1 ಕೋಟಿಗಿಂತ ಹೆಚ್ಚು 3 ಕೋಟಿಗಿಂತ ಕಡಿಮೆ | 4000 |
| 6. | 3 ಕೋಟಿಗಿಂತ ಹೆಚ್ಚು 10 ಕೋಟಿಗಿಂತ ಕಡಿಮೆ | 10000 |
| 7. | 10 ಕೋಟಿಗಿಂತ ಹೆಚ್ಚು 30 ಕೋಟಿಗಿಂತ ಕಡಿಮೆ | 30000 |
| 8. | 30 ಕೋಟಿಗಿಂತ ಹೆಚ್ಚು 50 ಕೋಟಿಗಿಂತ ಕಡಿಮೆ | 50000 |
| 9. | 50 ಕೋಟಿಗಿಂತ ಹೆಚ್ಚು | 75000 |

## ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ – ನಿಪ್ಪಾಣಿ


ಶ್ರೀ ಮಹೇಶ್ ವಿಶ್ವನಾಥ ಬಾಗೇವಾಡಿ
ಅಧ್ಯಕ್ಷರು

ನಿಪ್ಪಾಣಿ : ಶ್ರೀ ಮಹಾತ್ಮ ಬಸವೇಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೋಸೈಟಿ ನಿಯಮಿತ ಇದರ ನೂತನ ಅಧ್ಯಕ್ಷರಾಗಿ ಶ್ರೀ ಮಹೇಶ್ ವಿಶ್ವನಾಥ ಬಾಗೇವಾಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಅಶೋಕ ಮಹಾದೇವ ಲಿಗಾಡೆ ಆಯ್ಕೆಯಾಗಿದ್ದಾರೆ.


ಶ್ರೀ ಅಶೋಕ ಮಹಾದೇವ ಲಿಗಾಡೆ
ಉಪಾಧ್ಯಕ್ಷರು

## ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ – ಅರಿಹಂತ


ಶ್ರೀ ಜಿನ್ನಪ್ಪ ಬೆಳವಿ
ಅಧ್ಯಕ್ಷರು

ಅರಿಹಂತ ಅಲ್ಪ ಸಂಖ್ಯಾತರ ವಿವಿದ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಧುಪದಾಳ ಅಧ್ಯಕ್ಷರಾಗಿ ಶ್ರೀ ಜಿನ್ನಪ್ಪ ಬೆಳವಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಬಿ.ಜೆ.ಪರಪ್ಪನವರ್ ಆಯ್ಕೆಯಾಗಿದ್ದಾರೆ.


ಶ್ರೀ ಬಿ.ಜೆ. ಪರಪ್ಪನವರ್
ಉಪಾಧ್ಯಕ್ಷರು

# ಹಂಪಿ 10 ದಿನಗಳ ತರಬೇತಿ ಕಾಯ

ಸೌಹಾರ್ದ ಸಹಕಾರಿಗಲ ಅಧಿಕಾರಿಗಳಿಗಾಗಿ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನದ 10 ದಿನಗಳ ತರಬೇತಿ ಕಾರ್ಯಕ್ರಮ ತುಂಬ ಪ್ರಯೋಜನಕಾರಿಯಾಗಿತ್ತೆಂದು ಅಭ್ಯರ್ಥಿಗಳ ಅಭಿಪ್ರಾಯ ಸಂಯುಕ್ತ ಸಹಕಾರಿಯು ಈ ರೀತಿಯ ತರಬೇತಿ ಕಾರ್ಯಕ್ರಮಗಳ ಪ್ರಯೋಜನಕಾರಿ ಎಂದು ಕುಲಪತಿ ಮಂಜಪ್ಪರವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯವತಿಯಿಂದ ದಿನಾಂಕ 1/12/2011 ರಿಂದ 10/12/2011ರವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ನಡೆದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಸಮಾರೋಪ ಭಾಷಣ ಮಾಡಿದ ವಿಜಯ ನಗರ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಶ್ರೀ ಮಂಜಪ್ಪನವರು ಇಂತಹ ತರಬೇತಿ ಕಾರ್ಯಕ್ರಮಗಳು ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗಾಗಿ ಅತ್ಯಂತ ಅವಶ್ಯಕ. ಇತ್ತೀಚಿನ ದಿನಗಳಲ್ಲಿ ಸಹಕಾರ ಕ್ಷೇತ್ರದಲ್ಲಿ ಅನೇಕ ವಿಧವಾದ ಬದಲಾಣೆಗಳಾಗುತ್ತಿವೆ. ಈ ಎಲ್ಲ ವಿಧವಾದ ವಿಷಯಗಳನ್ನು ಅರಿತು ಅಧಿಕಾರಿಗಳು ಕಾರ್ಯನಿರ್ವಹಿಸಬೇಕಾಗುತ್ತದೆ. ಸಹಕಾರ ಕ್ಷೇತ್ರದಲ್ಲಿ ಅನೇಕ ವಿಧವಾದ ತರಬೇತಿ ಕಾರ್ಯಕ್ರಮಗಳ ವ್ಯವಸ್ಥೆಯಿದೆ. ಆದರೆ ವಿಶ್ವವಿದ್ಯಾಲಯಗಳ ಜೊತೆಗೂಡಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ತರಬೇತಿಗಳು ಹೆಚ್ಚು ಪರಿಣಾಮಕಾರಿಯಾಗುತ್ತವೆ. ಸಂಯುಕ್ತ ಸಹಕಾರಿಯು ಹಮ್ಮಿಕೊಂಡಿರುವ ಈ ಕಾರ್ಯಕ್ರಮವಂತೂ ವಿಶಿಷ್ಟವಾಗಿದೆ. ವಿಭಿನ್ನವಾಗಿದೆ. ಪರಿಣಾಮಕಾರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಶ್ರೀ ಮುರಿಗೆಪ್ಪರವರುಬದಲಾಗುತ್ತಿರುವ ಇಂದಿನ ಅರ್ಥವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರವು ಸಾಕಷ್ಟು ಪೈಪೋಟಿಯನ್ನು ಎದುರಿಸಿ ಕಾರ್ಯನಿರ್ವಹಿಸಬೇಕಿದೆ. ವ್ಯವಸ್ಥೆಗನುಗುಣವಾಗಿ ಕಾರ್ಯನಿರ್ವಹಿಸಬೇಕಿದೆ. ವ್ಯವಸ್ಥೆಗನುಗುಣವಾಗಿ ಕಾರ್ಯನಿರ್ವಹಿಸಬೆಕಾದುದು ಇಂದಿನ ಆದ್ಯತೆ.ಇದಕ್ಕಾಗಿ ಸಿಬ್ಬಂದಿವರ್ಗದವರಿಗೆ







ಶ್ರೀಮತಿ ಅಕ್ಕಮಹಾದೇವಿ ಗೋಕಳ್ಳ ಮ್ಯಾಗೇರಿ 'ಮಾದರಿ ಶಿಬಿರ'


ಶ್ರೀ ಕಲ್ಲಪ್ಪ ಬಿ. ತಾಳದ 'ಶಿಬಿರವು ಅತ್ಯುತ್ತಮವಾಗಿ'


ಶ್ರೀಮತಿ ನಾಗರತ್ನ ಎಂ. 'ಸಹಕಾರಿಗಳ ಅಭಿವೃದ್ಧಿಗೆ ಅತ್ಯಂತ'


ಶ್ರೀ ಬಸವರಾಜ್ ಎ.ಸವಣಗಿ 'ಆತ್ಮ ವಿಶ್ವಾಸ ತುಂಬುವ ಕಾರ್ಯಕ್ರಮ'


ಕುಮಾರಿ ರೋಹಿಣಿ 'ಉಪನ್ಯಾಸಗಳು ಅತ್ಯುತ್ತಮವಾಗಿತ್ತು'


ಶ್ರೀ ಹಣಮಂತ ವೆಂಕಟೇಶ ಕುಲಕರ್ಣಿ 'ಸಹಕಾರಿ ರಂಗದಲ್ಲೇ ಒಂದು ಉತ್ತಮವಾದ ತರಬೇತಿಯಾಗಿದೆ.


ಶ್ರೀ ಶಿವರಾಜ.ಕೆ. ಹೂಗಾರ ಹೊಸ ವಿಷಯಗಳನ್ನು ಕಲಿಯಲು ಅವಕಾಶ


ಶ್ರೀ ಸೀತಾರಾಮ ಪೂಜಾರಿ.ಡಿ. ಬದಲಾವಣೆಯನ್ನು ತಂದಿದೆ.


ಶ್ರೀಮತಿ ಗೀತಾ.ವಿ. ಗುರಿಯನ್ನು ಸಾಧಿಸಲು ತರಬೇತಿಯು ಅವಶ್ಯಕ


ಶ್ರೀ ವೈ.ಆರ್.ಮಹೇಶ್ ಪಾರದರ್ಶಕತೆ, ದಕ್ಷತೆ, ಶಿಸ್ತು ಮತ್ತು ಉತ್ಸಾಹಗಳನ್ನು ನೆನಪುಮಾಡಿಸಿತು.


ಶ್ರೀ ವಸಂತಕುಮಾರ್ ಜಿ. 'ಒಳ್ಳೆಯ ಸ್ನೇಹಿತರು ಲಭ್ಯವಾದರು. ಅತ್ಯಮೂಲ್ಯವಾದ ತರಬೇತಿ'



ಶ್ರೀ ರಾಜಶೇಖರ ದಾಬುಶೇಠ 'ಸೌಹಾರ್ದ ಸಹಕಾರಿ ಸಂಸ್ಥೆಗಳು ಅಭಿವೃದ್ಧಿಗೆ ಪೂರಕ'



ಶ್ರೀ ಎಲ್ ಆರ್ ಚಂದ್ರಶೇಖರಪ್ಪ 'ನಿತ್ಯದ ವ್ಯವಹಾರಗಳ ಅಭಿವೃದ್ಧಿಗೆ' ಅನುಕೂಲ'


ಶ್ರೀ ದಿಲೀಪ ಸದಾಶಿವ ನಾಯಕವಾಡ 'ಸಹಕಾರದ ಜ್ಞಾನ ಸಿಕ್ಕಿತು'

ಶ್ರೀ ಸ್ವಪ್ನಿಲ ಸುಭಾಷ ಚೌಗಲೆ ಸಹಕಾರಿಯನ್ನು ನಡೆಸುವ ಬಗ್ಗೆ ತರಬೇತಿಯಲ್ಲಿ ಮಾಹಿತಿಸಿಕ್ಕಿತು.


ಶ್ರೀ ರಮೇಶ್ ಶ್ರೀ ಗುಡ್ಡಿ ಈ ಕಾರ್ಯಾಗಾರಕ್ಕೆ ಬೆಲೆ ಕಟ್ಟಲು ಅಸಾಧ್ಯ


ಶ್ರೀ ಸಂಜಯ ಕೊರಟೇಕರ್ 'ಇಂತಹ ಕಾರ್ಯಾಗಾರವು ಆಗಿಂದಾಗಲೇ ನಡೆಯುತ್ತಿರಬೇಕು.


ಶ್ರೀ ಸೂರ್ಯಕಾಂತ ರಾಣೆ 'ತರಬೇತಿಯು ಅತ್ಯುತ್ತಮವಾಗಿತ್ತು.'


ಶ್ರೀ ರಾಜಶೇಖರ್ 'ಸದಾ ಕ್ರಿಯಾ ಶೀಲತೆಯಿಂದ ಕೂಡಿತ್ತು'


ಶ್ರೀಮತಿ ಸವಿತ ಎನ್. ಇ. ಕಾರ್ಯಾಗಾರವು ನಮ್ಮೆಲ್ಲರನ್ನು ಪರಿಯುವ ನೀರಾಗಿ ಪರಿವರ್ತಿಸಿದೆ.

# ...ರ್ಯಕ್ರಮ – ಅಭ್ಯರ್ಥಿಗಳ ಅಭಿಪ್ರಾಯ

ಇತ್ತೀಚಿನ ಎಲ್ಲ ಬೆಳವಣಿಗೆಗಳ ಮಾಹಿತಿಗಳನ್ನು ಪಡೆದು ಕಾರ್ಯನಿರ್ವಹಿಸಬೇಕಾಗುತ್ತದೆ. ಆದ್ದರಿಂದ ಶಿಕ್ಷಣದಷ್ಟೆ ಮಹತ್ವವನ್ನು ತರಬೇತಿಗೆ ಹಾಗೂ ಪ್ರಚಾರಕ್ಕೆ ನೀಡಬೇಕಾಗುತ್ತದೆ. ಈ ರೀತಿಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಸಹಕಾರ ಸಂಸ್ಥೆಯ ಕಾರ್ಯವಿಧಾನದಲ್ಲಿ ಪರಿಪಕ್ವತೆ ಬರಲು ಸಾಧ್ಯವಾಗುತ್ತದೆ. ವ್ಯಕ್ತಿತ್ವವೂ ವಿಕಸನವಾಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ರಮೇಶ ವೈದ್ಯ, ಕ್ಯಾಸ್ಕಾರ್ಡ್ ಬ್ಯಾಂಕ್ ಅಧ್ಯಕ್ಷ ಶ್ರೀ ಚೊಕ್ಕಬಸವನಗೌಡ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಗಳು ಅಧ್ಯಕ್ಷ ಶ್ರೀ ಸಂಜೀವ ಮಹಾಜನ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆನಂದ ಎಲ್.ಎಸ್. ಹಾಗೂ ಗಣ್ಯರು ಉಪಸ್ಥಿತರಿದ್ದು, ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್‌ರವರು ಮಾತಾನಾಡಿ ತರಬೇತಿ ಪಡೆದ ಅಭ್ಯರ್ಥಿಗಳು ಸಹಕಾರಿಯ ಅನುಪಯುಕ್ತ ಆಸ್ತಿಯಾಗದೆ ಜವಾಬ್ದಾರಿಯುತ ನಿಷ್ಠಾವಂತ ದಕ್ಷ ಹಾಗೂ ಶಿಸ್ತಿನ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಕರೆ ನೀಡಿದರು 10 ದಿನಗಳ ತರಬೇತಿ ಕಾರ್ಯಕ್ರಮದ ಸಂಪೂರ್ಣ ವರದಿಯನ್ನು ಶ್ರೀಜವಳಿಯವರು ಒಪ್ಪಿಸಿದರು.ಸಿ.ಆರ್ ಚಂದ್ರಶೇಖರ್ ಸ್ವಾಗತ ಕೋರಿದರು.

ಸಂಯುಕ್ತ ಸಹಕಾರಿಯ ಪರಿವಾಗಿ ಉಪಪ್ರಧಾನ ವ್ಯವಸ್ಥಾಪಕ ಶ್ರೀ ಯ. ಕುಮಾರವರು ವಂದಿಸುದರು. ನಿರೂಪಣೆಯನ್ನು ಶ್ರೀ ದಿನೇಶ ಬಾಬು ಮಾಡಿದರು. ಪ್ರಾರ್ಥನೆಯನ್ನು ಶ್ರೀ ಸುಬ್ಬರಾಯ ನಡೆಸಿಕೊಟ್ಟರು. ಕಾರ್ಯಕ್ರಮ ತುಂಬ ಪ್ರಯೋಜನಕಾರಿಯಾಗಿತೆಂದು ಅಭ್ಯರ್ಥಿಗಳು ಅಭಿಪ್ರಾಯ ಸೂಚಿಸಿದರು.











ಶ್ರೀ ವಿಜಯಕುಮಾರ್ ವಿ.
'ನನ್ನ ಜೀವನದಲ್ಲಿ ಮಹತ್ವದ ಶಿಬಿರ'


ಶ್ರೀ ಸತೀಶ್ ಬಾಬು 'ನನಗೆ ಕಲ್ಪನೆಯ ಉಪನ್ಯಾಸಗಳು ಉತ್ತಮವಾಗಿದ್ದವು'

ಕುಮಾರಿ ಮಂಜುಳ
ಸಹಕಾರಿಯನ್ನು ಸಾಧನೆಗೆ ಪೂರಕ

ಶ್ರೀ ಪ್ರಮೋದ್ ಕಾಶಪ್ಪ ಅಸಂಗಿ
ವ್ಯಕ್ತಿತ್ವ ವಿಕಸನಕ್ಕೆ ಅವಕಾಶವಾಯಿತು

ಕುಮಾರಿ ರೂಪಾದೇವಿ
ಭಾಗವಹಿಸುವುದೇ ಒಂದು ಭಾಗ್ಯ.











ಶ್ರೀ ಹೆಚ್.ಎಂ ಸುಬ್ಬರಾಯ
'ಅಚ್ಚುಕಟ್ಟಾದ ತರಬೇತಿ'

ಶ್ರೀ ಬಸವರಾಜ ಮಹಾದೇವ ಮಾಳ
'ತರಬೇತಿ ತುಂಬಾ ಲಾಭದಾಯಕವಾಗಿತ್ತು.'

ಕುಮಾರಿ ಮಧುಶ್ರೀ ಜಿ.ಎಸ್.
'ಉತ್ತಮ ಬಾಂಧವ್ಯದ ಜೋಡಣೆಗೆ ಸಹಕಾರಿಯಾಯಿತು'


ಶ್ರೀ ಶಿವಶಂಕರ್‌ರಾವ್ ಎಂ.
'ಉಪಯುಕ್ತವಾದುದ್ದಾಗಿತ್ತು.'

ಶ್ರೀ ಶರಣಗೌಡ ಗೌಡ ಜಿ. ಪಾಟೀಲ
ಎಲ್ಲವೂ ಉತ್ಕೃಷ್ಟವಾಗಿತ್ತು.











ಶ್ರೀ ಶಿವಾನಂದ ಬಸಪ್ಪ ಕಪಟಗಿ
'ನಮ್ಮ ಬುದ್ಧಿಶಕ್ತಿ ಆತ್ಮವಿಶ್ವಾಸ ಧೈರ್ಯವೃದ್ಧಿಸುವ ಉನ್ನತ ಮಟ್ಟದಾಗಿತ್ತು.'

ಶ್ರೀ ಪ್ರಸನ್ನ ಕುಮಾರ್ ಎಂ. ಸಿ.
'ಅಕ್ಷರ ಸಹ ಅತ್ಯುತ್ತಮವಾದ ವಿಚಾರಧಾರೆಗಳಿದ್ದವು'

ಶ್ರೀ ಎಸ್.ಕೆ. ಸತೀಶ್
'ತರಬೇತಿಗಳನ್ನು ಮತ್ತೆ ಮತ್ತೆ ಹಮ್ಮಿಕೊಳ್ಳಬೇಕು.'

ಶ್ರೀ ಅಶೋಕ ರಘುನಾಥರಾವ್ ಧಾಕ್ಷ
ತರಬೇತಿಯು ಇನ್ನೂ 5 ದಿನಗಳು ಹೆಚ್ಚಿದ್ದರೆ ಅನುಕೂಲವಾಗುತ್ತಿತು.

ಶ್ರೀ ವೆಂಕಟೇಶ ರಾಗಿ
'ವಿಷಯಗಳ ಉತ್ತಮವಾಗಿದ್ದು'





ಶ್ರೀ ಪಾಲನ ಗೌಡ
ಪ್ರಯೋಜನಕಾರಿಯಾಗಿತ್ತು.

ಶ್ರೀ ಬಿ.ಜಿ.ಜಾವಳಿ
ವ್ಯಕ್ತಿತ್ವದಲ್ಲಿ ಮಾರ್ಪಾಡುಗಳನ್ನು ಮಾಡಿದೆ.

ಶಿವಕುಮಾರ್ ಏರಾದರ್.
'ಅವಿಸ್ಮರಣೆಯವಾಗಿತ್ತು.'

ಶ್ರೀ ಸಂತೋಷ್ ಬಾಬು
ಸಾಗರೋಪಾದಿಯಲ್ಲಿತ್ತು.








## ಸಹಕಾರ ಶಿಕ್ಷಣ ನಿಧಿ ತೆಗೆದಿರಿಸಿ ಪಾವತಿಸುವ ಬಗ್ಗೆ

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ಇವರ ನ್ಯಾಯಾಲಯದ ತೀರ್ಪು ದಿನಾಂಕ24/12/2011(ಮೇಲ್ಮನವಿ ಸಂಖ್ಯೆ: ಆರ್‌ಸಿಎಸ್: ಡಿಪಿಎಸ್: ಡಿ3: ಸೌ-235:10–110

ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಹಾವೇರಿಯವರು ದಿನಾಂಕ/29.7.2010 ರಲ್ಲಿ ನಿಬಂಧಕರ ಕಛೇರಿಯಲ್ಲಿ ದಾವೆ ಸಲ್ಲಿಸಿ ಸಹಕಾರಿಯ ನೋಂದಾಯಿತ ಬೈಲಾ ಸಂಖ್ಯೆ 82ರ ರೀತ್ಯ ಅ) ಸಹಕಾರಿಯ ನೋಂದಾಯಿತ ಮೀಸಲು ನಿಧಿಗೆ ಶೇ.25 ಆ) ನಿವ್ವಳ ಲಾಭಂಶದಲ್ಲಿ ಸಹಕಾರ ಶಿಕ್ಷಣ ನಿಧಿ ಶೇ.2 ರಷ್ಟು ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳಕ್ಕೆ ಹಾಗೂ ಸಂಯುಕ್ತ ಸಹಕಾರಿಗೆ ಶೇ. 1 ರಷ್ಟು ಶಿಕ್ಷಣ ನಿಧಿಯನ್ನು ಸಂಬಂಧಿಸಿದ ಸಹಕಾರಿ ಮಹಾಮಂಡಳಗಳಿಗೆ ನೇರವಾಗಿ ಪಾವತಿಸತಕ್ಕದ್ದು ಎಂದು ಇರುವುದೆಂದು ಈ ಪ್ರಕಾರವೇ ಕಳೆದ 4 ಸಾಲುಗಳಿಂದ ಲಾಭಾಂಶ ವಿಲೇವಾರಿಗೆ ಕ್ರಮವಿಡಲಾಗುತ್ತದೆ. ಆದರೆ ಸೌಹಾರ್ದ ಸಂಯುಕ್ತ ಸಹಕಾರಿಯು ಸಹಕಾರ ಶಿಕ್ಷಣ ನಿಧಿಯನ್ನು ಲಾಭದಲ್ಲಿ ನೇರವಾಗಿ ಶೇ. 2 ರಷ್ಟು ಮಹಾಮಂಡಳಕ್ಕೆ ಶೇ.1 ರಷ್ಟು ಸಂಯುಕ್ತ ಸಹಕಾರಿಗೆ ಪಾವತಿಸದಿರುವುದಕ್ಕೆ ಸುಸ್ತಿದಾರರೆಂದು ಪರಿಗಣಿಸಿ ಸರ್ವಸದಸ್ಯರ ಸಭೆಯಲ್ಲಿ ಹಾಗೂ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶವಾಗುವುದಿಲ್ಲವೆಂದು ನೋಟೀಸ್ ನೀಡಲಾಗಿತ್ತು. ಈ ಬಗ್ಗೆ ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿಯ ಮೇಲ್ಮನವಿ ದಾವೆಯನ್ನು ಪರಿಶಿಲಿಸಿದ ನ್ಯಾಯಾಲಯವು ಸದರಿ ಸಹಕಾರಿಯ ವಾದವು ಪುರಸ್ಕರಿಸಲು ಯೋಗ್ಯವಾದದ್ದಲ್ಲವೆಂದು ಪರಿಗಣಿಸಿ ಸೌಹಾರ್ದ ಸಹಕಾರಿಕಾಯ್ದೆ 1997 ರಕಲಂ 10(XXI) (6)ರೀತ್ಯಾ ಸಹಕಾರ ಶಿಕ್ಷಣ ನಿಧಿ ತೆಗೆದು ಪಾವತಿಸಬೇಕೆಂದು ತೀರ್ಪು ನೀಡಿರುತ್ತಾರೆ.

# ಸ್ವಾಭಿಮಾನಿ ಸಹಕಾರಿ 2012

ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ, ನಮ್ಮ ಧ್ಯೇಯ

## ಜನವರಿ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಫೆಬ್ರವರಿ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | | | |

## ಮಾರ್ಚ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಏಪ್ರಿಲ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |


## ಮೇ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಜೂನ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |





ಶ್ರೀ ಎಸ್.ಆರ್. ಸತೀಶ್‌ಚಂದ್ರ
ಅಧ್ಯಕ್ಷರು

**ಜನವರಿ**
1 - ಹೊಸ ವರ್ಷ , ನೌಕರರ ಸಹಕಾರಿ ದಿನ
15 - ಮಕರ ಸಂಕ್ರಾಂತಿ
26 - ಗಣರಾಜ್ಯೋತ್ಸವ

**ಫೆಬ್ರವರಿ**
5 - ಈದ್-ಮಿಲಾದ್
20 - ಮಹಾ ಶಿವರಾತ್ರಿ

**ಮಾರ್ಚ್**
23 - ಚಾಂದ್ರಮಾನ ಯುಗಾದಿ

**ಏಪ್ರಿಲ್**
4 - ಮಹಾವೀರ ಜಯಂತಿ
6 - ಗುಡ್ ಫ್ರೈಡೇ,
14 - ಅಂಬೇಡ್ಕರ್ ಜಯಂತಿ
24 - ಬಸವ ಜಯಂತಿ

**ಮೇ**
1 - ಕಾರ್ಮಿಕರ ದಿನ
6 - ಬುದ್ಧ ಪೂರ್ಣಿಮಾ

**ಜುಲೈ**
27 - ವರಮಹಾಲಕ್ಷ್ಮಿ ವ್ರತ

**ಆಗಸ್ಟ್**
15 - ಸ್ವಾತಂತ್ರ್ಯ ದಿನ,
20 - ರಂಜಾನ್

**ಸೆಪ್ಟೆಂಬರ್**
18 - ಸ್ವರ್ಣಗೌರಿ ವ್ರತ,
19 - ಗಣೇಶ ಚತುರ್ಥಿ

**ಅಕ್ಟೋಬರ್**
2 - ಗಾಂಧಿ ಜಯಂತಿ,
15-ಮಹಾಲಯ ಅಮಾವಾಸ್ಯೆ
23 - ಮಹಾನವಮಿ/ ಆಯುಧಪೂಜೆ,
24 - ವಿಜಯದಶಮಿ
28 - ಬಕ್ರೀದ್, 29 - ವಾಲ್ಮೀಕಿ ಜಯಂತಿ

**ನವೆಂಬರ್**
1 - ಕನ್ನಡ ರಾಜ್ಯೋತ್ಸವ
12 - ನರಕ ಚತುರ್ದಶಿ
14 - ಬಲಿಪಾಡ್ಯಮಿ
24 - ಮೊಹರಂ ಕೊನೇ ದಿನ

**ಡಿಸೆಂಬರ್**
1 - ಕನಕದಾಸ ಜಯಂತಿ
25 - ಕ್ರಿಸ್‌ಮಸ್



ಶ್ರೀ ಗುರುನಾಥ ಜ್ಯಾಂತಿಕರ
ಉಪಾಧ್ಯಕ್ಷರು

## ಜುಲೈ

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಆಗಸ್ಟ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

## ಸೆಪ್ಟೆಂಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಅಕ್ಟೋಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ನವೆಂಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## ಡಿಸೆಂಬರ್

| ಭಾನು | ಸೋಮ | ಮಂ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಕನಾಟಕ ಸರ್ಕಾರ (ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ1 ಅಲಿ ಅಸ್ಕರ್ ರಸ್ತೆ, ಬೆಂಗಳೂರು-560052

ಸಂಖ್ಯೆ : ಆರ್‌ಎಸ್‌ಆರ್/139/ಸೌಕಾ/ಎಕ್ಸ್‌ಎಂಸಿ//2011-12 ದಿನಾಂಕ:15/12/2011

ಸುತ್ತೋಲೆ ಸಂಖ್ಯೆ -220

### ವಿಷಯ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯಲ್ಲಿಸಹಕಾರಿಗಳನ್ನು ನೊಂದಾಯಿಸುವ ಸಂದರ್ಭದಲ್ಲಿ ಸಂಗ್ರಹಿಸಬೇಕಾದ ಪ್ರಾರಂಭಿಕ ಷೇರು ಬಂಡವಾಳ, ಸದಸ್ಯತ್ವ ಸೇರ್ಪಡೆ ಹಾಗೂ ಇತರೆ ಮಾರ್ಗಸೂಚಿಗಳ ಬಗ್ಗೆ.

ಉಲ್ಲೇಖ:- ಈ ಕಛೇರಿಯ ಸುತ್ತೋಲೆ ಸಂಖ್ಯೆ: 194 ಸಂಖ್ಯೆ: ಸಂಖ್ಯೆ:ಆರ್‌ಎಸ್‌ಆರ್/ಸೌಕಾ/98/ಎಕ್ಸ್‌ಎಂಸಿ/ /2004-05, ದಿನಾಂಕ24-3-2011.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯಲ್ಲಿ ನೋಂದಾಯಿತವಾಗುವ ಅಥವಾ ಪರಿವರ್ತಿತವಾಗುವ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಉಲ್ಲೇಖದಲ್ಲಿ ಸೂಚಿಸಿರುವ ಸುತ್ತೋಲೆಯಲ್ಲಿ ಹಲವು ಮಾರ್ಗಸೂಚಿಗಳನ್ನು ನೀಡಲಾಗಿದೆ.

ಬದಲಾದ ಸನ್ನಿವೇಶ, ಹಣದ ಮೌಲ್ಯದಲ್ಲಿನ ವ್ಯತ್ಯಾಸದ ಹಿನ್ನೆಲೆಯಲ್ಲಿ, ಸಮಕಾಲೀನ ವ್ಯವಸ್ಥೆ ಹಾಗೂ ಬದಲಾದ ಕಾನೂನಿನ ಅವಕಾಶಗಳಿಗನುಗುಣವಾಗಿ ಸದರಿ ಸುತ್ತೋಲೆಯಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿ ಹಾಗೂ ಮಾನದಂಡಗಳನ್ನು ಮಾರ್ಪಡಿಸುವ ಅವಶ್ಯಕತೆಯನ್ನು ಮನಗಾಣಲಾಗಿದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖದಲ್ಲಿ ಸೂಚಿಸಿರುವ ಸುತ್ತೋಲೆಯನ್ನು ಮಾರ್ಪಡಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯಲ್ಲಿ ನೋಂದಾಯಿತವಾಗುವ ಸಹಕಾರಿಗಳ ನೋಂದಾಣಿ ಸಂದರ್ಭದಲ್ಲಿ ಕೆಳಕಂಡ ನಿರ್ದೇಶನಗಳನ್ನು ಪಾಲಿಸಲು ನೋಂದಣಿ ಪ್ರಾಧಿಕಾರಿಗಳಿಗೆ ಸೂಚಿಸಲಾಗಿದೆ.

ಮಾರ್ಗಸೂಚಿಗಳು :

1) ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಪೂರ್ವದಲ್ಲಿ ನಡೆಯುವ ಸಭೆಯಲ್ಲಿ ಕನಿಷ್ಠ 10 (ಹತ್ತು) ಜನ ಪ್ರವರ್ತಕರು, ಈ ಪ್ರವರ್ತಕರ ಪೈಕಿ ಈರ್ವರು ಮುಖ್ಯ ಪ್ರವರ್ತಕರಾಗಿ ಆಯ್ಕೆ ಹೊಂದಿರಬೇಕು. ಪ್ರವತಕರ ಭಾವಚಿತ್ರವಿರುವ ಪರಿಚಯ ಪತ್ರ ಲಗತ್ತಿಸಬೇಕು. ಸಹಕಾರಿಯ ಸ್ಥಾಪನೆಗೆ ಆರ್ಥಿಕ ಸಬಲತೆ, ಕಾರ್ಯ ಸಾಧ್ಯತೆ (financial viability, feasibility) ಬಗ್ಗೆ ಯೋಜನಾವರದಿ ಮತ್ತು ತಾಂತ್ರಿಕ ವರದಿ (project report and technical report and technical report)ಗಳು ಇರಬೇಕು.

2) ಸಹಕಾರಿಯ ಉಪವಿಧಿಗಳಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಪ್ರಕರಣ 10 ಮತ್ತು ಇತ್ತೀಚೆಗೆ ತಿದ್ದುಪಡಿಯಾಗಿರುವ ಎಲ್ಲಾ ಅವಕಾಶಗಳು ಸೇರ್ಪಡೆಯಾಗಿರಬೇಕು. ಇದಲ್ಲದೆ, ಉಪವಿಧಿಯಲ್ಲಿ ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್, ನಬಾರ್ಡ್ ಮತ್ತು ಕೇಂದ್ರ/ ರಾಜ್ಯ ಸರ್ಕಾರಗಳು ನೀಡಿರುವ ಸುತ್ತೋಲೆ ನಿರ್ದೇಶನಗಳನ್ನು ಉಪವಿಧಿಯಲ್ಲಿ ಅಳವಡಿಸಿಕೊಂಡಿರುವುದನ್ನು ಪಾಲಿಸಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಸದಸ್ಯೇತರರಿಂದ ಠೇವಣಿ ಸಂಗ್ರಹಿಸಲು ಉಪವಿಧಿಗಳಲ್ಲಿ ಅವಕಾಶ ನೀಡತಕ್ಕದಲ್ಲ. ನಾಮಮಾತ್ರ ಸದಸ್ಯರಿಂದಲೂ ಸಹ ಠೇವಣಿ ಸ್ವೀಕರಿಸಲು ಅವಕಾಶ ಮಾಡತಕ್ಕದ್ದಲ್ಲ.

3) ಸಹಕಾರಿ ಸಂಘಟನೆ ಸಂದರ್ಭದಲ್ಲಿ ಸಹಕಾರಿಯ ಹೆಸರಿನೊಂದಿಗೆ ಸೌಹಾರ್ದ ಎಂಬ ಪದ ಮತ್ತು ಪತ್ತಿನ ಸಹಕಾರಿಗಳಲ್ಲಿ ಪತ್ತಿನ ಸೌಹಾರ್ದ ಸಹಕಾರಿ ಎಂಬ ಪದಗಳನ್ನು ಸೇರಿಸಬೇಕು. ಉದ್ದೇಶಿತ ಸಹಕಾರಿಯ ಹೆಸರನ್ನು ಈಗಾಗಲೇ ನೋಂದಣಿಯಾಗಿರುವ ಸಹಕಾರ ಸಂಘ; ಸೌಹಾರ್ದ ಸಹಕಾರಿಗಳು ಬಳಸಿರಬಾರದು. ಆರ್ಥಿಕ ಸಬಲತೆ: ಕಾರ್ಯ ಸಾಧ್ಯತೆ, ಉದ್ದೇಶಿತ ಸೌಹಾರ್ದ ಸಹಕಾರಿಯ ನೋಂದಣಿ ಬಗ್ಗೆ ಮನವರಿಕೆಯಾದ ನಂತರ ಮುಖ್ಯ ಪ್ರವರ್ತಕರಿಗೆ ಪ್ರಾರಂಭಿಕ ಷೇರು ಧನ ಸಂಗ್ರಹಣೆಗೆ ಅನುಮತಿ ನೀಡತಕ್ಕದ್ದು.

4) ಉದ್ದೇಶಿತ ಸೌಹಾರ್ದ ಸಹಕಾರಿಯ ಆರ್ಥಿಕ ಸಬಲತೆ ಮತ್ತು ಕಾರ್ಯ ಸಾಧ್ಯತೆಯನ್ನು ದೃಢಪಡಿಸಿಕೊಂಡ ನಂತರ ಪ್ರಾಧಿಕಾರವು ಪತ್ತಿನ ಧ್ಯೇಯೋದ್ದೇಶವಿರುವ ಹಾಗೂ ವಿವಿಧೋದೇಶ ಸಹಕಾರಿಗಳಿಗೆ ಕೆಳಗೆ ನಮೂದಿಸಿರುವ ಕನಿಷ್ಠ ಸದಸ್ಯರಿಂದ ಪ್ರಾರಂಭಿಕ ಷೇರು ಹಣ ಸಂಗ್ರಹಿಸಲು ಸೂಚಿಸತಕ್ಕದ್ದು.

| ಕ್ರ.ಸಂ. | ಸಹಕಾರಿಯ ಕಾರ್ಯವ್ಯಾಪ್ತಿಯ | ಜನಸಂಖ್ಯೆ | ಕನಿಷ್ಠ ಸದಸ್ಯರು ಪ್ರಾರಂಭಿಕವಾಗಿ ಸಂಗ್ರಹಿಸಬೇಕಾದ ಷೇರುಧನದ ಮೊತ್ತ |
|---|---|---|---|
| 1 | 2 ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ | 200 | ರೂ.4.00 ಲಕ್ಷ |
| 2 | 2 ಲಕ್ಷದ ಮೇಲ್ಪಟ್ಟು 10 ಲಕ್ಷದವರೆಗೆ | 300 | ರೂ.6.00 ಲಕ್ಷ |
| 3 | 5 ಲಕ್ಷದ ಮೇಲ್ಪಟ್ಟು 10 ಲಕ್ಷದ ವರೆಗೆ | 500 | ರೂ.10.00 ಲಕ್ಷ |
| 4 | 10 ಲಕ್ಷದ ಮೇಲ್ಪಟ್ಟು 20 ಲಕ್ಷದ ವರೆಗೆ | 750 | ರೂ.15.00 ಲಕ್ಷ |
| 5 | 20 ಲಕ್ಷದ ಮೇಲ್ಪಟ್ಟು | 1000.00 | ರೂ.20.00 ಲಕ್ಷ |

5) ಯೋಜನಾ ವರದಿಯಲ್ಲಿ ಸಹಕಾರಿಯ ಧ್ಯೇಯೋದ್ದೇಶಗಳ ಈಡೇರಿಕೆ, ಗುರಿ ಸಾಧನೆ, ಅನುಸರಿಸುವ ವಿಧಿ ವಿಧಾನಗಳು, ಮುನ್ನೇರ್ಪಾಟು ಇತ್ಯಾದಿಗಳನ್ನೊಳಗೊಂಡಿರಬೇಕು. ಅವುಗಳು ವಾಸ್ತವಿಕವಾಗಿರಬೇಕು. ಕಾಲ್ಪನಿಕವಾದ, ಯಾಂತ್ರಿಕವಾದ ಯೋಜನಾ ವರದಿಗಳನ್ನು ಮಾನ್ಯ ಮಾಡಬಾರದು. ನೈಜಸ್ಥಿತಿ ಹಾಗೂ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸುವಂತಿರಬೇಕು. ಅದನ್ನು ತಜ್ಞರು/ ಪರಿಣಿತರು ಸಿದ್ಧಪಡಿಸಿರಬೇಕು.

6) ಜನಸಂಖ್ಯೆ ಪ್ರಮಾಣದ ನಿರ್ಧಾರಕ್ಕೆ 2011 ಜನಗಣತಿಯನ್ನು ಗಣನೆ ತೆಗೆದುಕೊಳ್ಳತಕ್ಕದ್ದು.

7) ಪ್ರಕರಣ5(2)ಲ ಅನ್ವಯ ಉಪವಿಧಿಯಲ್ಲಿ ನಮೂದಿಸಿರುವ ಒಟ್ಟು ಅಧಿಕೃತ ಷೇರು ಬಂಡವಾಳದ ಮೊತ್ತಕ್ಕೆ ಶೇ1% ನೋಂದಣಿ ಶುಲ್ಕವನ್ನು ಕನಿಷ್ಠ ರೂ.500/- ಗರಿಷ್ಠರೂ.5000/- ಗಳನ್ನು ನಿಗಧಿಪಡಿಸಿ, ನೋಂದಣಿ ಶುಲ್ಕವನ್ನು ಸರ್ಕಾರಕ್ಕೆ ಈ ಕೆಳಕಂಡ ಲೆಕ್ಕಶೀರ್ಷಿಕೆಗೆ ಪಾವತಿ ಮಾಡತಕ್ಕದ್ದು

8) ಮಹಿಳೆಯರೇ ಸಂಘಟಿಸುವ ಸಹಕಾರಿಗಳು ಮಹಿಳಾ ಸದಸ್ಯರು/ಸಮೂಹ ಗುಂಪಿನ ಸದಸ್ಯರು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರು ಸಂಘಟಿಸುವ ಪತ್ತಿನ ಸಹಕಾರಿಗಳಿಗೆ ಮೇಲಿನ ಯಾದಿಯಲ್ಲಿ ನಮೂದಿಸಿರುವ ಮೊತ್ತ ಹಾಗೂ ಸದಸ್ಯದಲ್ಲಿ ಶೇ.50% ರಷ್ಟು ಮಾತ್ರ ಗುರಿ ನಿಗಧಿಪಡಿಸತಕ್ಕದ್ದು.

9) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ನೋಂದಣಿಯಾದ ಸಹಕಾರ ಸಂಘವು ಸೌಹಾರ್ದ ಸಹಕಾರಿಯಾಗಿ ಪರಿವರ್ತನೆ ಹೊಂದಲು ಸೌಹಾರ್ದ ಸಹಕಾರಿ ಅಧಿನಿಯಮದಲ್ಲಿ ಅವಕಾಶವಿದ್ದು, ಪ್ರಕರಣ 5 ರಲ್ಲಿ ತಿಳಿಸಿರುವ ಅವಶ್ಯಕ ದಾಖಲಾತಿಗಳನ್ನು ಪ್ರಸ್ತಾವೆಯೊಂದಿಗೆ ಸಲ್ಲಿಸಿದ ನಂತರ ಪರಿವರ್ತನೆಗೆ ಕ್ರಮವಿಡತಕ್ಕದ್ದು. ಅಗತ್ಯವಿದ್ದಲ್ಲಿ ಮೂಲ ದಾಖಲೆ ಪತ್ರಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡ ನಂತರ ನೋಂದಣಿ ಮಾಡುವುದು. ಆದರೆ ಪರಿವರ್ತನಾ ಪೂರ್ವದಲ್ಲಿ ಸಹಕಾರ ಸಂಘಕ್ಕೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಎ(5), 30(1) ಮತ್ತು 31ರಂತೆ ಆಡಳಿತಾಧಿಕಾರಿ: ವಿಶೇಷಾಧಿಕಾರಿ ನೇಮಕವಾಗಿರಬಾರದು.

10) ಯಾವುದೇ ಸಹಕಾರಿಯು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಸಂದರ್ಭದಲ್ಲಿ ಈಗ ಹಾಲಿಯಿರುವ ಅರ್ಥಾತ್ ಆ ಸಂದರ್ಭದ ಪೂರ್ವಸ್ಥಿತಿಯ ಅನುಮೋದನಾ ಪ್ರಾಧಿಕಾರದ ಶಿಫಾರಸ್ಸಿನೊಂದಿಗೆ ಕಾರ್ಯವ್ಯಾಪ್ತಿ ವಿಸ್ತರಣೆ ಮಾಡುವ ಅಧಿಕಾರವುಳ್ಳ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

11) ಸೌಹಾರ್ದ ಸಹಕಾರಿ ಅಧಿನಿಯಮದಡಿ ನೋಂದಣಿಯಾಗಿರುವ ಸಹಕಾರಿಯು ಒಂದು ಸಹಕಾರ ಸಂಘವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ಪರಿವರ್ತನೆ ಹೊಂದಲು ಅವಕಾಶವಿದ್ದು ಇದಕ್ಕಾಗಿ ಸೌಹಾರ್ದ ಸಹಕಾರಿಯು ತನ್ನ ಸಾಮಾನ್ಯ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕಾರ್ಯವ್ಯಾಪ್ತಿಯ ನಿಬಂಧಕರಿಗೆ ಪ್ರಸ್ತಾವೆ ಸಲ್ಲಿಸಬಹುದು ಆದರೆ ಸೌಹಾರ್ದ ಸಹಕಾರಿಯು ಪ್ರಕರಣ 14ರಂತೆ ಪಾಲುದಾರಿಕೆ ಸಹಕಾರಿ (Partnership cooperative) ಯನ್ನಾಗಲಿ ಮತ್ತು ಪ್ರಕರಣ 15ರಂತೆ ಸಹಾಯಕ ಸಂಸ್ಥೆ (Subsidiary organisatin) ಯನ್ನಾಗಲಿ, ಮತ್ತು ಪ್ರಕರಣ 16ರಂತೆ ಸಹಯೋಗ ಸಹಕಾರಿ(Collaboration cooperative) ಯನ್ನಾಗಲಿ, ಸ್ಥಾಪನೆ/ ಸಂಘಟನೆ ಮಾಡಬಾರದು. ಇದಲ್ಲದೆ, ಪ್ರಕರಣ35 ರ ವಿಚಾರಣೆ ಇರಬಾರದು ಮತ್ತು ಪ್ರಕರಣ 26(2) ಮತ್ತು 38ರ ಅವಕಾಶದ ರೀತ್ಯಾ ಆಡಳಿತಾಧಿಕಾರಿ ನೇಮಕವಾಗಿರಬಾರದು.

12) ಸಹಕಾರಿಯ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ಯಾವುದೇ ಬಗೆಯ ಆಡಳಿತಾತ್ಮಕ ವಿವಾದಗಳು ಬಾರದಂತೆ ಸ್ಪಷ್ಟ ಮತ್ತು ನಿಖರ ಭೌಗೋಳಿಕ ಪ್ರದೇಶಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಭಾಗಶಃ ಪ್ರದೇಶ ಎಂಬ ಅರ್ಥವಿರಬಾರದು.

13) ಸಹಕಾರಿ ನೋಂದಣೀಯಾದ ನಂತರ ಎಲ್ಲಾ ಆದೇಶ ಪ್ರತಿಗಳನ್ನು ಉಪವಿಧಿಗಳೊಂದಿಗೆ ಸಹಕಾರಿಗಳ ನಿಬಂಧಕರಿಗೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಈ ಸಂಸ್ಥೆಗೆ ಸಹಕಾರಿಯ ಉಪವಿಧಿಯೊಂದಿಗೆ ಕಳುಹಿಸತಕ್ಕದ್ದು. ಸೌಹಾರ್ದ ಸಹಕಾರಿ ಬ್ಯಾಂಕ್ ಆಗಿದ್ದಲ್ಲಿ, ನೋಂದಣಿ ಆದೇಶದ ಪ್ರತಿ ಮತ್ತು ಉಪವಿಧಿ ಪ್ರತಿಗಳೊಂದಿಗೆ ಭಾರತೀಯ ರಿಸವ್ ಬ್ಯಾಂಕ್‌ಗೆ ಕಳುಹಿಸತಕ್ಕದ್ದು.

14) ಒಂದು ಪ್ರಸ್ತಾವಿತ ಸೌಹಾರ್ದ ಸಹಕಾರಿ ಬ್ಯಾಮಕ್ ಅಥವಾ ಹಾಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ನೋಂದಣಿಯಾದ ಸಹಕಾರ ಬ್ಯಾಂಕ್‌ನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಪೂರ್ವಾನುಮತಿ ಇಲ್ಲದೆ ನೋಂದಣಿ ಮಾಡತಕ್ಕದ್ದಲ್ಲ ಅಥವಾ ಪರಿವರ್ತನೆಗೊಳಿಸತಕ್ಕದ್ದಲ್ಲ. ಬ್ಯಾಂಕ್ ಆಗಿದ್ದ ಸಂದರ್ಭದಲ್ಲಿ ಭಾರತೀಯ ರಿಸರ್ವ್‌ಬ್ಯಾಂಕಿನ ಅನುಮತಿ ಇಲ್ಲದೆ ಪತ್ತಿನ ಇಲ್ಲದೆ ಪತ್ತಿನ ಸಹಕಾರಿಯಾಗಿ ಪರಿವರ್ತನೆಗೊಳಿಸಬಾರದು ಹಾಗೂ ಸದಸ್ಯತ್ವ, ಕಾರ್ಯವ್ಯಾಪ್ತಿ, ಷೇರುಹಣ ಸಂಗ್ರಹಣೆ ಇತ್ಯಾದಿ ಸಂದರ್ಭಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸುವುದು.

15) ಸೌಹಾರ್ದ ಸಹಕಾರಿ ಅಧಿನಿಯಮದಡಿ ಹೊಸದಾಗಿ ಗೃಹನಿರ್ಮಾಣ ಸಹಕಾರಿ ನೋಂದಣಿ ಮಾಡತಕ್ಕದ್ದಲ್ಲ ಅಥವಾ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘವನ್ನು ಸೌಹಾರ್ದ ಸಹಕಾರಿಯಾಗಿ ಪರಿವರ್ತಿಸಿ ನೋಂದಣಿ ಮಾಡತಕ್ಕದ್ದಲ್ಲ.

16) ಸಾವಯುವ ಕೃಷಿ ಸಹಕಾರಿಗಳ ನೋಂದಣಿಯ ಸಂದರ್ಭದಲ್ಲಿ ಈ ಕಛೇರಿಯ ಸುತ್ತೋಲೆ ಸಂಖ್ಯೆ: ಆರ್.ಎಸ್. ಆರ್/01/ನೋಂದಣಿ/2011-12, ದಿನಾಂಕ03-5-2011ರ ಸೂಚನೆಗಳನ್ನು ಪಾಲಿಸತಕ್ಕದ್ದು.

17) ಸಹಕಾರಿಗಳ ನೋಂದಣಿ ಸಂದರ್ಭದಲ್ಲಿ ಪರಿಭಾಷೆ, ವ್ಯಾಖ್ಯಾನ, ಮಾರ್ಗಸೂಚಿ ಇತ್ಯಾದಿಗಳಲ್ಲಿ ಗೊಂದಲ, ಸಂಶಯಗಳುಂಟಾದಲ್ಲಿ ಕೇಂದ್ರ ಕಚೇರಿಯ ಸಲಹೆ ಸೂಚನೆ ಪಡೆದು ನೋಂದಣಿ ಮಾಡತಕ್ಕದ್ದು.

18) ಕಾಲಕಾಲಕ್ಕೆ ಸರ್ಕಾರ, ನಿಬಂಧಕರು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಪಾಲಿಸುವುದು.

19) ಈ ಮಾರ್ಗಸೂಚಿಗಳು ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

0425-ಸಹಕಾರ-00-800-ಇತರೇ ಸ್ವೀಕೃತಿ-0-09
ನೋಂದಣಿ ಶುಲ್ಕ(ಸೌಹಾರ್ದ) 0425-00-800-0-09
0425-cooperation-00-800-other receipts-0-09
Registration fee(Souharda)0425-00-800-0-09

ಸಹಿ/-
(ಎಸ್. ಜಿ. ಹೆಗಡೆ)
ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು

# ಸೌಹಾರ್ದ ಸಹಕಾರಿಗಳಿಂದ ಸಮಾಜಕ್ಕೆ ಹೆಚ್ಚಿನ ಸೇವೆಗಳನ್ನು ನೀಡಲು ಸಾಧ್ಯ

ಸೌಹಾರ್ದ ಸಹಕಾರಿಗಳಿಂದ ಸಮಾಜಕ್ಕೆ ಹೆಚ್ಚಿನ ಸೇವೆಗಳು ನೀಡಲು ಸಾಧ್ಯವೆಂದು ಸಹಕಾರಿಯ ಹಿರಿಯರಾದ ಶ್ರೀ ಸಿದ್ದನಗೌಡ ಚನ್ನಬಸವಗೌಡ ಪಾಟೀಲ್‌ರವರು ಹೇಳಿದರು.

ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ದಿನಾಂಕ: 01.01.2012ರಂದು ಜರುಗಿದ ಸೌಹಾರ್ದ ಸಹಕಾರಿ ದಿನಾಚರಣೆ ಸಂಧರ್ಬದಲ್ಲಿ ಧ್ವಜವಂದನೆ ಸ್ವೀಕರಿಸಿ, ಬೆಳಗಾವಿ ಮಹಾನಗರ ಪಾಲಿಕೇಯ ಪ್ರಥಮ ಕನ್ನಡ ಮಾಜಿ ಮಹಾಪೌರರು, ಕರ್ನಾಟಕ ರಾಜ್ಯ ಕನ್ನಡ ಅಭಿವೃದ್ದಿ ಮಂಡಳಿ ಸದಸ್ಯರು, ಬೆಳಗಾವಿ ಜಿಲ್ಲಾ ಗ್ರಾಹಕ ಸಗಟು ಮಾರಾಟ ಸಹಕಾರಿ ಸಂಘದ ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಹಕರ ಮಾರಾಟ ಮಹಾ ಮಂಡಳದ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಬೆಳಗಾವಿ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನ ಹಿಂದಿನ ನಿರ್ದೇಶಕರು, ಕರ್ನಾಟಕ ರಾಜ್ಯ ಹೌಸಿಂಗ್ ಬೋರ್ಡಿನ ಮಾಜಿ ನಿರ್ದೇಶಕರು, ಬೆಳಗಾವಿ ಸಹಕಾರಿ ನೂಲಿ ಗಿರಿಣಿಯ ಮಾಜಿ ನಿರ್ದೇಶಕರು, ಬೆಳಗಾವಿ ಪಿ.ಎಲ್.ಡಿ. ಬ್ಯಾಂಕಿನ ಮಾಜಿ ನಿರ್ದೇಶಕರಾದ ಶ್ರೀಯುತ ಸಿದ್ದನಗೌಡ ಚನ್ನಬಸವಗೌಡ ಪಾಟೀಲರವರು ಮಾತನಾಡುತ್ತಾ ಕರ್ನಾಟಕ ಸಹಕಾರಿ ಸಂಘಗಳ ಕಾನೂನು ಅಡಿ ಕೆಲವು ಸಹಕಾರಿ ಸಂಘಗಳು ಬೆಳೆದಿದ್ದರು, ಸದರಿ ಕಾನೂನಿನ ಅಡಿಯಲ್ಲಿರುವ ಬಹಳ ಕಟ್ಟಳೆಗಳು, ನಿಯಮಗಳು ಇರುವುದರಿಂದ ಸಹಕಾರಿ ಸಂಘಗಳಿಗೆ ರಭಸದಿಂದ ಬೆಳೆಯಲು ಹೆಚ್ಚಿನ ಅಸ್ಪದ ದೊರೆತಿಲ್ಲ.

ಕರ್ನಾಟಕ ಸರ್ಕಾರವು 2000 ಇಸ್ವಿಯಿಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ತಂದಿದ್ದರಿಂದ ಈ ಕಾಯ್ದೆಯ ಅಡಿಯಲ್ಲಿ ಸಹಕಾರಿ ಸಂಘಗಳಿಗೆ ಸಂಪೂರ್ಣ ಸ್ವಾಯತ್ತತೆ, ಸ್ವತಂತ್ರ ಆಡಳಿತ ಮತ್ತು ನಿಯಂತ್ರಣಗಳ ಅಧಿಕಾರ ಇರುವುದರಿಂದ ಸದರಿ ಕಾಯ್ದೆಯಲ್ಲಿ ನೋಂದಾಯಿಸಲ್ಪಟ್ಟ ಸೌಹಾರ್ದ ಸಹಕಾರಿಗಳು ಉತ್ತಮ ರೀತಿಯಲ್ಲಿ ಕೆಲವೇ ಅವಧಿಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿವೆ. ಈ ಕಾನೂನಿನಲ್ಲಿ ಕೆಲಸ ಮಾಡುವ ಪತ್ತಿನ ಸಹಕಾರಿಗಳು ಸ್ವಲ್ಪ ಅವಧಿಯಲ್ಲಿಯೇ ನೂರಾರು ಕೋಟಿಗಳಷ್ಟು ಠೇವುಗಳನ್ನು ಸಂಗ್ರಹಿಸಿ ಬಹಳಷ್ಟು ಸದಸ್ಯರಿಗೆ ದೊಡ್ಡ ಪ್ರಮಾಣಗಳಲ್ಲಿ ಸಾಲಗಳನ್ನು ವಿತರಿಸಿದ್ದಾರೆ, ಅದಲ್ಲದೇ ಸೌಹಾರ್ದ ಸಹಕಾರಿ ಸಂಘಗಳು ಕರ್ನಾಟಕ ರಾಜ್ಯದಲ್ಲಿ ಇ-ಸ್ಟಾಂಪಿಂಗ ವ್ಯವಹಾರಗಳು ಬಹಳಷ್ಟು ಕೇಂದ್ರಗಳನ್ನು ಹೊಂದಿ ಉತ್ತಮ ರೀತಿಯಲ್ಲಿ ಈ ಸ್ಟಾಂಪಿಂಗ್ ವ್ಯವಹಾರಗಳ ನಿರ್ವಹಿಸುತ್ತಿವೆ. ಇದಲ್ಲದೇ ಈ ಸೌಹಾರ್ದ ಸಹಕಾರಿಗಳು ರೈಲ್ವೆ, ವಿಮಾನ, ಬಸ್ಸುಗಳ ಟೀಕೇಟ ಮುಂಗಡವಾಗಿ ಕಾಯ್ದಿರಿಸುವ ಕೆಲಸಗಳನ್ನು ಮತ್ತು ಸದಸ್ಯರಿಗೆ ವಿಮಾ ಪಾಲಿಸಿ ವ್ಯವಹಾರಗಳನ್ನು, ಪ್ಯಾನ ಕಾರ್ಡಗಳನ್ನು ಮಾಡಿಸುವ ವ್ಯವಹಾರಗಳನ್ನು ಬಲು ಉತ್ತಮವಾಗಿ ನಿರ್ವಹಿಸುತ್ತಿವೆ. ಇವೆಲ್ಲ ಸೌಹಾರ್ದ ಸಹಕಾರಿಗಳ ಸಮೂಹದ ಹೆಮ್ಮೆಯ ವಿಷಯವಾಗಿದೆ.

ಈ ಸಂದರ್ಭದಲ್ಲಿ ವಿಭಾಗೀಯ ರಿಜಿನಲ ಮ್ಯಾನೇಜರಾದ ಶ್ರೀ ಜಿ.ಎಸ.ಟೋಪಣ್ಣವರ ಸೇರಿದಂತೆ ಹಲವು ಸಹಕಾರಿ ಬಂಧುಮಿತ್ರರು ಹಾಗೂ ಸಿಬ್ಬಂದಿ ವರ್ಗದವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿ ದಿನಾಚರಣೆ



ದಿನಾಂಕ: 02-01-2012 ರಂದು ಸೌಹಾರ್ದ ಸಹಕಾರಿ ದಿನದ ಪ್ರಯುಕ್ತ ಪುತ್ತೂರಿನಲ್ಲಿ ಕಾರ್ಯಚರಿಸುತ್ತಿರುವ ಎಲ್ಲಾ ಸೌಹಾರ್ದ ಸಹಕಾರಿಗಳು ಜೊತೆಯಾಗಿ ಶ್ರೀ ರಾಮಕೃಷ್ಣ ಸೇವಾ ಸಮಾಜ (ರಿ) ಇಲ್ಲಿನ ಮಕ್ಕಳಿಗೆ ಮಧ್ಯಾಹ್ನದ ಒಂದು ಹೊತ್ತಿನ ಊಟದ ವ್ಯವಸ್ಥೆ ನೀಡುವ ಮೂಲಕ ವಿಶಿಷ್ಟ ರೀತಿಯಲ್ಲಿ ಆಚರಿಸಿತು.

ಈ ಕುರಿತು ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರಾಮಕೃಷ್ಣ ಸೇವಾ ಸಮಾಜದ (ರಿ) ಇದರ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂ ಕೊಳತ್ತಾಯ ವಕೀಲರು ವಹಿಸಿದ್ದರು. ಪುತ್ತೂರಿನ ಸರಸ್ವತಿ ಸೌಹಾರ್ದ, ಅಶ್ವಿನಿ ಸೌಹಾರ್ದ, ಪ್ರವೀಣ್ ಸೌಹಾರ್ದ, ಸ್ವಾಭಿಮಾನಿ ಸೌಹಾರ್ದ ಮತ್ತು ಸ್ನೇಹ ಸೌಹಾರ್ದದ ಪ್ರತಿನಿಧಿಗಳು ಹಾಗೂ ಶ್ರೀ ರಾಮಕೃಷ್ಣ ಸೇವಾ ಸಮಾಜದ ಪುಟಾಣಿ ಮಕ್ಕಳು, ಸೇವಾನಿರತರು ಮತ್ತು ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಪ್ರಶಸ್ತಿಯ ಹಂಬಲಕ್ಕಾಗಿ ಮಾನವೀಯತೆ ಮರೆತು ಪಶ್ಚಾತ್ತಾಪದ ದಳ್ಳುರಿಯಲ್ಲಿ ಬೆಂದ ಫೋಟೊಗ್ರಾಫ್ ಕೇವಿನ ಕಾರ್ಟರ್

1994ರಲ್ಲಿ ಸುಡಾನ್‌ನಲ್ಲಿ ಭೀಕರ ಬರಗಾಲ ದಿನವು ಅನ್ನಕ್ಕಾಗಿ ಪರಿತಪಿಸಿ ಸಾವಿರಾರು ಲಕ್ಷಾಂತರ ಜನರ ಸಾವು, ಅನೇಕ ದೇಶಗಳಿಂದ ಸುಡಾನ್‌ಗೆ ನೆರವು ವಿಶ್ವಸಂಸ್ಥೆಯಿಂದ ಅಲ್ಲಲ್ಲಿ ಗಂಜಿ ಕೇಂದ್ರ ಸ್ಥಾಪನೆ. ಒಂದು ಹೃದಯಸ್ಪರ್ಷಿ ಘಟನೆ.



ಅಶಕ್ತ ಮಗುವೊಂದು ಗಂಜಿ ಕೇಂದ್ರದತ್ತ ಅಂಬೆಗಾಲಿಡುತ್ತ ಬರುತ್ತಿದೆ. ಅದಕ್ಕೆ ಶಕ್ತಿಯಿಲ್ಲ. ಕಷ್ಟಪಟ್ಟು ಅಂಬೆಗಾಲಿಡುತ್ತಿದೆ. ಅದು ಯಾವಾಗ ಸಾಯಿತ್ತದೆ? ಯಾವಾಗ ಅದನ್ನು ತಿನ್ನಬೇಕು? ಎಂದು ಕಾಯ್ದು ಕೂತಿರುವ ಒಂದು ರಣಹದ್ದು.

ಈ ದೃಶ್ಯವನ್ನು ಕೇವಿನ ಕಾರ್ಟರ ಫೋಟೊ ತೆಗೆಯಲು ಹಂಬಲಿಸಿದ, ಫೋಟೊ ತೆಗೆದ. ಆ ಫೋಟೊ ತೆಗೆದಿದ್ದರಿಂದ ಅವನಿಗೆ ಪ್ರತಿಷ್ಠಿತ ಪ್ರಶಸ್ತಿ ಸಿಕ್ಕಿತು. ಆದರೆ ಕೇವಿನಗೆ ಪ್ರಶಸ್ತಿ ಸಂತೋಷ ಉಂಟುಮಾಡಲಿಲ್ಲ. ಏಕೆಂದರೆ ಫೋಟೊ ತೆಗೆಯುವ ಹಂಬಲದಲ್ಲಿ ಮಾನವೀಯತೆಯನ್ನು ಮರೆತಿದ್ದ ಕೇವಿಯನ್. ಮಗುವಿನ ಸಾವನ್ನು ಕಾಯುತ್ತಿದ್ದ ರಣಹದ್ದು ಮಗು ಸತ್ತೊಡನೆ ತಿನ್ನಲು ಹವಣಿಸಿತು. ಫೋಟೊ ತೆಗೆಯುವುದನ್ನು ಬಿಟ್ಟು ಮಗುವನ್ನು ಗಂಜಿ ಕೇಂದ್ರಕ್ಕೆ ತಲುಪಿಸಿದ್ದರೆ ಮಗು ಬದುಕಿ ಉಳಿಯುತ್ತಿತ್ತೇನೊ? ಎಂದು ಪಶ್ಚಾತಾಪದ ದಳ್ಳುರಿಯಲ್ಲಿ ಬೆಂದ ಕೇವಿನ ಏನೇ ಆಗಲಿ ಮೊದಲು ಮಾನವೀಯ ಮೌಲ್ಯಗಳಿಗೆ ಆದ್ಯತೆ ಇರಬೇಕು ಎಂದು ಅಂದುಕೊಂಡ.

**- ವಸಂತ ಗೀತಾ ಹಿರೇಮಠ, ಅಧ್ಯಾಪಕರು ಸಹಕಾರ ತರಬೇತಿ ಕೇಂದ್ರ, ಬೆಳಗಾವಿ.**

## ಹುಟ್ಟು ಹಬ್ಬ ಆಚರಣೆ

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕಿರಿಯ ಅಧಿಕಾರಿಯಾದ ಶ್ರೀಮತಿ ಸವಿತ ಎನ್ ಇ ರವರ ಹುಟ್ಟು ಹಬ್ಬವನ್ನು ಕೇಕ್‌ಕಟ್ ಮಾಡಿ ಸಿಹಿ ಹಂಚುವುದರ ಮೂಲಕ ಸಂಭ್ರಮದಿಂದ ಆಚರಿಸಲಾಯಿತು.



# ಸಹಕಾರಿ ನಿಬಂಧಕರು ನಿರ್ವಹಿಸುವ ಕಾರ್ಯಗಳು



ಸಿ.ಎನ್. ಪರಶಿವಮೂರ್ತಿ
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

(ಹಿಂದಿನ ಸಂಚಿಕೆಯಿಂದ)

ಅನಿಸಿಕೆಗಳು ಉತ್ತೇಜನಕಾರಿಯಾಗಿದ್ದರೂ, 1800 ಸಹಕಾರಿಗಳ ಎಲ್ಲಾ ಸಿಬ್ಬಂದಿ ಮತ್ತು ನಿರ್ದೇಶಕರಿಗೆ ಅವಶ್ಯಕ ತಿಳುವಳಿಕೆ ಮಟ್ಟ ಹೆಚ್ಚಿಸಲು ಪ್ರಯತ್ನ ಅವಶ್ಯಕ.

ಸೌಹಾರ್ದ ಕಾಯಿದೆ ರಚನೆ ಮಾಡಿದಾಗ ಸಹಕಾರ ಸಂಘಗಳ ಕಾಯಿದೆ 1959ರಲ್ಲಿ ನೋಂದಣಿಯಾದ ಸಂಘಗಳು ಬಹಳಷ್ಟುಸಂಖ್ಯೆಯಲ್ಲಿ ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದುತ್ತಾರೆಂಬ ಭಾವನೆ ಇತ್ತು. ಏಕೆಂದರೆ 1959ರ ಕಾಯಿದೆಯಲ್ಲಿ ಸರ್ಕಾರ/ನಿಬಂಧಕರು ದಿನನಿತ್ಯದ ವ್ಯವಹಾರದಲ್ಲಿಯೂ ಮಧ್ಯಪ್ರವೇಶಿಸುವ ಅಧಿಕಾರ ಇದೆಯಾದ್ದರಿಂದ, ಸ್ವಾಯತ್ತ, ಸ್ವತಂತ್ರ ಸಂಸ್ಥೆಗಳಾಗಿ ಕೆಲಸ ನಿರ್ವಹಿಸಲು ಸಾಧ್ಯವಿಲ್ಲವೆಂದು, ಸಿಕ್ಕ ಎಲ್ಲಾ ವೇದಿಕೆಗಳಲ್ಲಿ ಸಹಕಾರಿ ಮುಖಂಡರು ಪ್ರತಿಪಾದಿಸುತ್ತಿದ್ದರು. ಆದ್ದರಿಂದ ಸೌಹಾರ್ದ ಕಾಯಿದೆಗೆ ವರ್ಗಾವಣೆ ಹೊಂದ ಬಹುದೆಂದು ಭಾವಿಸಲಾಗಿತ್ತು. ಆದರೆ 1959ರ ಕಾಯಿದೆಯಿಂದ ವರ್ಗಾವಣೆಯಾದ ಸಹಕಾರ ಸಂಘಗಳ ಸಂಖ್ಯೆ ಹೆಚ್ಚಾಗಲಿಲ್ಲ. ಇದನ್ನು ಗಮನಿಸಿದರೆ, ಸಹಕಾರಿ ಮುಖಂಡರು ಸ್ವಾಯತ್ತತೆ ಮತ್ತು ಸ್ವಾತಂತ್ರ್ಯದಲ್ಲಿ ನಂಬಿಕೆ ಇದ್ದಂತೆ ಕಾಣುತ್ತಿಲ್ಲ. ಮತ್ತು ಸರ್ಕಾರದ/ನಿಬಂಧಕರ ನಿಯಂತ್ರಣದ ಅವಶ್ಯಕತೆ ಇದೆ ಎಂದಾಯಿತು ಅಥವಾ ಸರ್ಕಾರದಿಂದ ಪ್ರತ್ಯಕ್ಷ/ಪರೋಕ್ಷ ಧನಸಹಾಯ ಪಡೆಯಲು ವರ್ಗಾವಣೆಯಾಗಿಲ್ಲವೆಂದು ಭಾವಿಸಬಹುದು. ಸಹಕಾರಿ ತತ್ವಗಳನ್ನು ಜಾರಿ ಮಾಡುವ ಯಾವುದೇ ಸಂಸ್ಥೆ ಸ್ವಾಯತ್ತತೆ, ಪ್ರಜಾಪ್ರಭುತ್ವದ ಶಕ್ತಿ, ಸ್ವಯಂ ಆಡಳಿತ, ವ್ಯವಹಾರಿಕ ಸ್ವಾತಂತ್ರ್ಯ ಬಯಸುತ್ತವೆ. ಆದರೆ ಈ ಬಗ್ಗೆ ಸಹಕಾರಿಗಳು ಯಾಕೆ ಗಮನಹರಿಸಲ್ಲವೆಂಬುದೆ ಅರ್ಥವಾಗುತ್ತಿಲ್ಲ.



**(2) ಸಹಕಾರಿ ಶಿಕ್ಷಣ, ತರಬೇತಿ ಮತ್ತು ಪ್ರಚಾರ :** ಶಿಕ್ಷಣ ನಿಧಿಯನ್ನು ಶೇಕಡ 3ರಂತೆ ಲಾಭಾಂಶದಲ್ಲಿ ಪಡೆದು ಶೇಕಡಾ ಒಂದನ್ನು ಸಂಯುಕ್ತ ಸಹಕಾರಿಗೂ ಮತ್ತು ಶೇಕಡ ಎರಡನ್ನು ಕರ್ನಾಟಕರಾಜ್ಯ ಸಹಕಾರಿ ಮಹಾಮಂಡಳಕ್ಕೂ ಪಾವತಿಸಿಬೇಕಾಗಿದೆ. ಈ ರೀತಿ ಪಾವತಿಸಿದ ಶೇಕಡ ಎರಡರಷ್ಟು ಹಣದಿಂದ ಸೌಹಾರ್ದ ಸಹಕಾರಿಗಳಿಗೆ ಶಿಕ್ಷಣ, ತರಬೇತಿ ಮತ್ತು ಪ್ರಚಾರದ ಉಪಯೋಗ ಆಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಶೇಕಡ ಎರಡನ್ನು ಮಹಾಮಂಡಳಕ್ಕೆ ಕೊಡಬೇಕೆಂಬ ಪ್ರಸ್ತಾವನೆ ಚರ್ಚಿಸುವಾಗ, ಸಂಯುಕ್ತ ಸಹಕಾರಿ ಪ್ರಾರಂಭದ ಹಂತದಲ್ಲೂ ಶಿಕ್ಷಣ, ತರಬೇತಿಗಾಗಿ ಮೂಲ ಸೌಕರ್ಯಗಳ ಕೊರತೆಯಿಂದ ನಿರ್ವಹಿಸಬಾರದು ಎಂದು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಹಲವಾರು ದಶಕಗಳಿಂದ ಮೂಲ ಸೌಲಭ್ಯ ಹೊಂದಿದ್ದು, ಇದನ್ನು ಸೌಹಾರ್ದ ಸಹಕಾರಿಗಳು ಉಪಯೋಗಿಸಬಹುದೆಂದು ಶೇಕಡ ಎರಡರಷ್ಟು ಲಾಭವನ್ನು ವರ್ಗಾಯಿಸಲಾಗುತ್ತಿದೆ. ಅದರೆ ಸೌಹಾರ್ದ ಸಹಕಾರಿಗಳ ಬೇಡಿಕೆಗೆ ಸಮಾನಾಂತರವಾಗಿ ವ್ಯವಸ್ಥೆಯಾಗುತ್ತಿಲ್ಲ. ಸಂಯುಕ್ತ ಸಹಕಾರಿ ನಡೆಸುವ ಶಿಕ್ಷಣ, ತರಬೇತಿ ಕಾರ್ಯಕ್ರಮಗಳು ಹೆಚ್ಚು ಪ್ರಭಾವಿಯಾಗಿ ನಡಿಸುತ್ತಿದ್ದು, ಸ್ಪಂದಿಸುವ ನಿರ್ದೇಶಕರ, ನೌಕರರ ಮತ್ತು ಸದಸ್ಯರ ಸಂಖ್ಯೆ ಹೆಚ್ಚಿದೆ. ಗುಣಾತ್ಮಕ ತರಬೇತಿ ಕೊಡುತ್ತಾರೆಂಬ ಭಾವನೆ ಬಹಳಷ್ಟು ಸಹಕಾರಿಗಳ ಭಾವನೆ ಇದೆ. ಆದ್ದರಿಂದ ಶಿಕ್ಷಣ ಮತ್ತು ತರಬೇತಿ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳ ನಡಿಸುತ್ತಿದ್ದು, ಈ ಬಗ್ಗೆ ಗುಣಾತ್ಮಕತೆ ಬಗ್ಗೆ ವಿಮರ್ಶೆಯಾಗುತ್ತಿಲ್ಲ. ಸಂಯುಕ್ತ ಸಹಕಾರಿ ನಡೆಸುವ ತರಬೇತಿ ಮತ್ತು ಶಿಕ್ಷಣದ ಬಗ್ಗೆ ಒಂದು ವಿಮರ್ಶೆ ಮಾಡಿಸಲು, ಸಂಯುಕ್ತ ಸಹಕಾರಿ ಕ್ರಮ ಜರುಗಿಸಬೇಕು.

**(3) ಸಂಶೋಧನೆ, ಮೌಲ್ಯಮಾಪನ ಮತ್ತು ಯೋಜನೆಗಳು :** ಬಹಳಷ್ಟು ಸಂಖ್ಯೆಯ ಪತ್ತಿನ ಸಹಕಾರಿಗಳು ಗಣಕೀಕರಣಗೊಂಡು, ಇತ್ತೀಚೆಗೆ ಇ-ಸ್ಟಾಂಪಿಂಗ್ ವ್ಯವಸ್ಥೆಯನ್ನು ತೃಪ್ತಿಕರವಾಗಿ ನಡಿಸುತ್ತಿದ್ದು-ಇಂತಹ ಸೇವೆಗಳನ್ನು ವಿಸ್ತರಿಸುಬುದು ಅವಶ್ಯಕ. ಈಗಿನ ಕಾರ್ಯ ನಿರ್ವಹಣೆಯಲ್ಲಿ ಸಮರ್ಪಕ ಕೆಲಸ ನಿರ್ವಹಿಸುತ್ತಿವೆ. ಕೆಲವೊಂದು ಸಂಸ್ಥೆಗಳು ಸದಸ್ಯರಿಂದ ಕ್ರೋಢೀಕರಿಸಿದ ಸಂಪನ್ಮೂಲವನ್ನು, ಅದೇ ಸಹಕಾರಿಯ ಪ್ರವರ್ತಕರು ಪ್ರಾಯೋಜಿಸಿದ ಮತ್ತೊಂದು ಸಂಸ್ಥೆ ಭೂ ಅಭಿವೃದ್ಧಿ, ನಿವೇಶನಗಳಲ್ಲಿ ತೊಡಗಿಸಿ, ಸದಸ್ಯರ ಹಿತ ಕಪಾಡುವುದನ್ನು ಮರೆತು ಮತ್ತು ಠೇವಣಿದಾರರ ಹಿತಕ್ಕೆ ವಿರುದ್ಧವಾಗಿ ಹಣ ವರ್ಗಾವಣೆಯಾಗುತ್ತಿರುವುದನ್ನು ಗಮನಿಸಿದರೆ ಈ ಬಗ್ಗೆ ಸಂಯುಕ್ತ ಸಹಕಾರಿ ಮಧ್ಯಪ್ರವೇಶ ಮಾಡಿ ಸೂಕ್ತ ಮಾರ್ಗದರ್ಶನ ನೀಡಬೇಕು. ತಪ್ಪು ಮಾಡಿದ ಸಹಕಾರಿಗಳಿಗೆ ಕಲಂ 38ರಡಿ ಮಧ್ಯಪ್ರವೇಶ ಮಾಡಬಹುದು. ಅಥವಾ ಕಲಂ35ರಡಿ ನಿಬಂಧಕರಿಗೆ ಲಿಖಿತ ಮನವಿ ಸಲ್ಲಿಸಿ ವಿಚಾರಣೆ ಮಾಡಿದ ನಂತರ ನ್ಯೂನತೆಗಳ ಆಧಾರದ ಮೆಲೆ ಕಲಂ 38ರ ಕ್ರಮ ಜರುಗಿಸುವುದು. ಈ ಬಗ್ಗೆ ಸದಸ್ಯ ಸಹಕಾರಿಗಳಿಗೆ ಕಾರ್ಯ ನಿರ್ವಹಣೆ ಬಗ್ಗೆ ಮಾರ್ಗದರ್ಶನ ನೀಡತಕ್ಕದ್ದು.

ನಿಬಂಧಕರ ಕಛೇರಿಯಲ್ಲಿ ಒಂದು ಸಂಶೋಧನೆ ಮತ್ತು ಮೌಲ್ಯಮಾಪನ ವಿಭಾಗವಿದ್ದು, ಸೌಹಾರ್ದ ಸಹಕಾರಿಗಳ ಕಾರ್ಯ ನಿರ್ವಹಣೆ ಬಗ್ಗೆ ಸಂಶೋಧನೆ ನಡಿಸಿ ವರದಿ ಪಡೆಯಬಹುದು. ಅಥವಾ ಸ್ವತಂತ್ರ ಸಂಸ್ಥೆಗಳ ಮುಖಾಂತರ ಮೌಲ್ಯಮಾಪನ ಮಾಡಿಸಬಹುದು. ರಾಷ್ಟ್ರ ಮಟ್ಟದಲ್ಲಿ ಸೌಹಾರ್ದ ಸಹಕಾರಿಗಳ ಬಗ್ಗೆ ವಿಮರ್ಶಾತ್ಮಕ, ಮೌಲ್ಯಮಾಪನ ಮಾಡಿದ ವರದಿಗಳನ್ನು ಪಡೆದು ಪ್ರಚಾರ ಮಾಡುವುದು. ಇತ್ತೀಚೆಗೆ ರಾಷ್ಟ್ರೀಯ ಮಟ್ಟದ ಸಂಸ್ಥೆಗಳು ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ನೋಂದಣಿಯಾದ ಸಹಕಾರಿಗಳ ಬಗ್ಗೆ ವರದಿಗಳು ಬಂದಿವೆ. ಅವುಗಳನ್ನು ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ರವಾನಿಸುವುದು.

**(4) ಸದಸ್ಯ ಸಹಕಾರಿಯ ಸೌಹಾರ್ದ ಸಂಬಂಧ :** ಸಹಕಾರ ತತ್ವಗಳಲ್ಲಿ ಆರನೆಯ ತತ್ವವಾಗಿ ಸಹಕಾರಿಗಳಲ್ಲಿ ಸಹಕಾರ ಎಂದು ರೂಪಿಸಲಾಗಿದೆ. ಅದನ್ನು ಜಾರಿ ಮಾಡಲು ನಿಬಂಧಕರು ಯಾವುದೇ ರೀತಿ ಈ ಆರನೇ ಸಹಕಾರ ತತ್ವದಲ್ಲಿ ನೇರವಾಗಿ ಮಧ್ಯಪ್ರವೇಶಕ್ಕೆ ಅವಕಾಶ ಇರಲಿಲ್ಲ. ಸಂಯುಕ್ತ ಸಹಕಾರ ಒಂದು ಪ್ರಜಾಪ್ರಭುತ್ವದಡಿ ಆಯ್ಕೆಯಾದ ಸಂಸ್ಥೆ ಮತ್ತು ಶಾಸನಬದ್ಧವಾಗಿ ಕಾಯಿದೆಯಲ್ಲಿಯೇ ರಚಿಸಿರುವ ಅರೆನ್ಯಾಯಿಕ ಅಧಿಕಾರಗಳನ್ನು ಚಲಯಿಸಲು ಅಧಿಕಾರ ನೀಡಲಾಗಿದೆ. ಸಂಯುಕ್ತ ಸಹಕಾರಿಯು ಪ್ರಜಪ್ರಭುತ್ವದಡಿ ರಚನೆಯಾದ ಸಂಸ್ಥೆಯಾದ್ದರಿಂದ ಸದಸ್ಯ ಸಹಕಾರಿಗಳ ಜೊತೆ ಸಂಪರ್ಕ ಪಡೆಯುವುದು, ನಿಬಂಧಕರಿಗಿಂತ ಹೆಚ್ಚು ಅವಕಾಶಗಳಿವೆ. ಸಹಕಾರಿ ಸಂಸ್ಥೆಗಳು ಸಾಮಾನ್ಯವಾಗಿ ಮತ್ತೊಂದು ಸಹಕಾರಿ ಜೊತೆ ಸಹಕರಿಸುವುದಿಲ್ಲ. ಅದರಲ್ಲೂ ಪ್ರಮುಖವಾಗಿ ಸಂಸ್ಕರಣೆ ಮಾರಾಟ ಸಂಸ್ಥೆಗಳ ಜೊತೆ, ಪತ್ತೇತರ ಸಹಕಾರಿಗಳಲ್ಲಿ ಸಮರ್ಪಕವಾದ ಸಹಕಾರಿಗಳಲ್ಲಿ ಸಹಕಾರ ಇಲ್ಲವೆಂದು ತಿಳಿಯಬಹುದು. ಸಂಯುಕ್ತ ಸಹಕಾರಿ ಈ ದಿಕ್ಕಿನಲ್ಲಿ ಹೆಚ್ಚು ಆಸಕ್ತಿ ವಹಿಸಿ, ಸಹಕಾರಿಗಳಲ್ಲಿ ಸಹಕಾರ ಇಲ್ಲವೆಂದು ತಿಳಿಯಬಹುದು. ಸಂಯುಕ್ತ ಸಹಕಾರ ಈ ದಿಕ್ಕಿನ್ಲಿ ಹೆಚ್ಚು ಆಸಕ್ತಿ ವಹಿಸಿ, ಸಹಕಾರಿಗಳಲ್ಲಿ ಸಹಕಾರ ತತ್ವವನ್ನು ಅನುಷ್ಠಾನಗೊಳಿಸಬೇಕು. ಇದಕ್ಕೆ ಪೂರಕವಾಗಿ ಹಾಲಿ ಸಂಯುಕ್ತ ಸಹಕಾರಿ, ಪತ್ತಿನ ಸಹಕಾರಿಗಳ ರಚನೆಗೆ ತೋರಿಸುವಂತ ಆಸಕ್ತಿಯನ್ನು, ಪತ್ತೇತರ ಸಹಕಾರಿಗಳ ರಚನೆ/ ಕಾರ್ಯಾಚರಣೆ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದು ಸೂಕ್ತ.

**(5) ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಮತ್ತು ಸದಸ್ಯ ಸಹಕಾರಿಗಳ ಸಂಬಂಧ :** ಸಂಯುಕ್ತ ಸಹಕಾರಿ ಪ್ರಜಾಪ್ರಭುತ್ವದ ಆಧಾರದ ಮೇಲೆ ರಚನೆಯಾಗುತ್ತದೆಯಾದ್ದರಿಂದ, ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ, ಸದಸ್ಯ ಸಹಕಾರಿಗಳ ಸ್ವಾಯತ್ತ ಸಂಸ್ಥೆಗಳಾಗಿದ್ದರೂ, ಸಂಯುಕ್ತ ಸಹಕಾರಿಯ ನಿರ್ದೇಶಕರು ಮತ್ತು ಸಂಯುಕ್ತ ಸಹಕಾರಿ, ಮಾರ್ಗದರ್ಶನದ ಅವಶ್ಯಕತೆ ಇದೆ. ನಿಬಂಧಕರು ಸಹಕಾರಿಗಳಿಗೆ ಮಾರ್ಗದರ್ಶಿ, ದಾರ್ಶನಿಕ ಮತ್ತು ಸ್ನೇಹಿತನಂತೆ ಕಾರ್ಯನಿರ್ವಹಿಸುತ್ತಾರೆಂಬ ನಂಬಿಕೆಯಂತೆ, ಸಂಯುಕ್ತ ಸಹಕಾರಿಯೂ ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶಿ, ದಾರ್ಶನಿಕ ಮತ್ತು ಸ್ನೇಹಿತನ ಕಾರ್ಯ ನಿರ್ವಹಿಸಬೇಕು.

ಮುಂದಿನ ಸಂಚಿಕೆಗೆ...



ಎಚ್. ಶಿವಕುಮಾರ್
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

# ಸಹಕಾರಿ ವಲಯವು ಕಾರ್ಪೋರೇಟ್ ವಲಯದೊಂದಿಗೆ ಪೈಪೋಟಿಗೆ ಇಳಿಯಬೇಕಿದೆ

ಇತ್ತೀಚೆಗೆ ಗಂಗಾವತಿಯಲ್ಲಿ ಜರುಗಿದ ಅಖಿಲ ಭಾರತ 78ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಂದು ಅಪರೂಪದ ವಿಚಾರ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. "ಕರ್ನಾಟಕದಲ್ಲಿ ಸಹಕಾರ ಚಳುವಳಿಗಳು" ಎಂಬ ವಿಷಯದ ಮೇಲೆ ಗೋಷ್ಠಿಯೊಂದು ನಡೆಯಿತು. ಸಾಹಿತ್ಯ ಸಮ್ಮೇಳನದಲ್ಲಿ ಸಹಕಾರ ಚಳುವಳಿಗಳ ಮೇಲೆ ಗೋಷ್ಠಿಯೊಂದು ಆಯೋಜನಗೊಂಡಿದ್ದು, ಅಪರೂಪದ ವಿಷಯವೇ ಸರಿ. ಕನ್ನಡ ಸಾಹಿತ್ಯ ಸಮ್ಮೇಳನ ಬರೀ ಸಾಹಿತ್ಯಕ ವಿಚಾರಗಳಿಗೆ ಮಾತ್ರ ಮೀಸಲಾಗಿರದೇ ಕನ್ನಡ ಜನರ ಬದುಕು-ಬವಣೆಗಳ ಬಗ್ಗೆಯೂ ಸ್ಪಂದಿಸುವಂತಹ ಒಂದು ವೇದಿಕೆಯಾಗಬೇಕು ಎಂಬ ಆಶಯ ಕಳೆದ ಹಲವು ವರ್ಷಗಳಿಂದ ಚಿಂತನೆಯಲ್ಲಿದ್ದ ಪರಿಣಾಮವಾಗಿ "ಸಹಕಾರ"ದಂತಹ ಕ್ಷೇತ್ರಗಳ ಬಗ್ಗೆಯೂ ಸಮ್ಮೇಳನದಲ್ಲಿ ಚರ್ಚೆಗೆ ಅವಕಾಶವಾಗಿದೆ. ಸಹಕಾರಿ ಕ್ಷೇತ್ರ ನಮ್ಮ ಜನಸಮುದಾಯದ ಬೇಕು-ಬೇಡಗಳನ್ನ, ಸಮಸ್ಯೆ-ಸವಲತ್ತುಗಳನ್ನು ಬಿಂಬಿಸುತ್ತಿರುವ ಕ್ಷೇತ್ರ. ಸಹಕಾರಿ ಕ್ಷೇತ್ರದ ಸದಸ್ಯರು, ಸಿಬ್ಬಂದಿ, ಆಡಳಿತ ವರ್ಗ ಇವರೆಲ್ಲ ಸಂಖ್ಯೆ ದೃಷ್ಟಿಯಿಂದ ನಮ್ಮ ಸಮಾಜದ ಬಹು ಮುಖ್ಯ ಭಾಗವನ್ನು ಪ್ರತಿನಿಧಿಸುತ್ತಿದ್ದಾರೆ. ಹಾಗಾಗಿ ಸಹಕಾರಿ ಕ್ಷೇತ್ರದ ಬಗ್ಗೆ ಚರ್ಚಿಸುವುದೆಂದರೆ ಅದು ಸಮಾಜದ ಒಂದು ಪ್ರಮುಖ ಭಾಗವೊಂದರ ಬಗ್ಗೆ ಚಿಂತಿಸಿದಂತೆ. ಕರ್ನಾಟಕದಲ್ಲಿ ನಡೆದು ಹೋಗಿರುವ ಮತ್ತು ನಡೆಯುತ್ತಿರುವ ಸಹಕಾರಿ ಚಟುವಟಿಕೆಗಳು ಮತ್ತು ಚಳುವಳಿಗಳು ಕನ್ನಡ ಸಂಸ್ಕೃತಿಯ ಮತ್ತು ಇತಿಹಾಸದ ಅವಿಭಾಜ್ಯ ಅಂಗ. ಈ ದೃಷ್ಟಿಯಿಂದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಹಕಾರ ಚಳುವಳಿಯನ್ನುದ್ದೇಶಿಸಿ ಗೋಷ್ಠಿಯನ್ನು ವ್ಯವಸ್ಥಾಪಿಸಿದ್ದು, ತೀರಾ ಅವಶ್ಯಕ ಮತ್ತು ಅಭಿನಂದನಾರ್ಹ.

ಗೋಷ್ಠಿಯಲ್ಲಿ ಹಲವು ವಿಚಾರಗಳಿಗೆ ಸಂಬಂಧಿಸಿದಂತೆ ವಿಸ್ತಾರವಾದ ಚರ್ಚೆಯಾದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಗೋಷ್ಠಿಯಲ್ಲಿ ಮಾತನಾಡಿದ ಪರಿಣಿತರು ಸಹಕಾರಿ ಕ್ಷೇತ್ರದಲ್ಲಿ ಮಧ್ಯಮ ಮತ್ತು ಕೆಳವರ್ಗದ ಜನರು, ಬಡವರು, ಅತಿ ಬಡವರು, ದುರ್ಬಲ ಮಹಿಳೆಯರು ತಮ್ಮನ್ನು ತಾವು ಹೆಚ್ಚಿನ ರೀತಿಯಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಅಂಶವನ್ನು ಹೇಳಿದ್ದಾರೆ. ಈ ಎಲ್ಲಾ ವರ್ಗದ ಜನರನ್ನು ತನ್ನ ವ್ಯಾಪ್ತಿಗೆ ತಂದಿಟ್ಟುಕೊಳ್ಳುವಲ್ಲಿ ಸಹಕಾರ ಕ್ಷೇತ್ರ ಇನ್ನೂ ಮಹತ್ವದ ಕಾರ್ಯಾಚರಣೆ ಮಾಡಬೇಕಾದ ಅಗತ್ಯವನ್ನು ಗೋಷ್ಠಿಯಲ್ಲಿ ಚರ್ಚಿಸಲಾಗಿದೆ. ನಮ್ಮ ದೇಶದಲ್ಲಿ ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ಇಂತಹದೊಂದು ಪ್ರಯತ್ನ ಸಹಕಾರ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿ ಆಗಬೇಕಾಗಿದೆ. ಸಹಕಾರಿ ಕ್ಷೇತ್ರ ಎಂದರೆ ಸದಸ್ಯರಿಗೆ ಸಾಲ ನೀಡುವಂತಹ ಸಂಘಗಳನ್ನು ಸ್ಥಾಪಿಸುವುದು ಎಂಬ ಸೀಮಿತ ಅರ್ಥದಿಂದ ಹೊರ ಬಂದು, ಸಣ್ಣ ಉಳಿತಾಯ, ಉದ್ಯೋಗ ಸೃಷ್ಟಿ, ಸ್ತ್ರೀ ಸಂವರ್ಧನೆ, ಪರಿಸರ ಸಂರಕ್ಷಣೆ, ಕಂಪ್ಯೂಟರ್ ಶಿಕ್ಷಣ, ಉನ್ನತ ಶಿಕ್ಷಣಕ್ಕೆ ಉತ್ತೇಜನ, ಸಾಂಸ್ಕೃತಿಕ ಪ್ರಜ್ಞೆ, ಜ್ಯಾತ್ಯತೀತ ನಿಲುವು, ಸ್ಥಳೀಯ ಸಮಸ್ಯೆಗಳ ಸೌಹಾರ್ದಯುತ ಪರಿಹಾರ ಇಂತಹ ಹಲವು ದೃಷ್ಟಿಕೋನಗಳುಳ್ಳ ಸಾಂಘಿಕ ಚಟುವಟಿಕೆಗಳನ್ನು ಸಹಕಾರಿ ಕ್ಷೇತ್ರದ ವಿಸ್ತಾರವಾದ ಹರಿವಿನಡಿಯಲ್ಲಿ ಹಮ್ಮಿಕೊಂಡಲ್ಲಿ ಗೋಷ್ಠಿಯಲ್ಲಿ ಚರ್ಚೆಯಾದ ವಿಷಯಗಳಿಗೆ ಜೀವಂತಿಕೆ ಬರುವಂತಾಗುತ್ತದೆ. ಸಹಕಾರಿ ವಲಯ ಇಂದಿನ ದಿನಗಳಲ್ಲಿ ತನ್ನನ್ನು ತಾನು ಪ್ರಸ್ತುತ ಎಂದೆನಿಸಿಕೊಳ್ಳಬೇಕಾದರೆ ಸಹಕಾರಿ ವಲಯವು ಕಾರ್ಪೋರೇಟ್ ವಲಯದೊಂದಿಗೆ ಪೈಪೋಟಿಗೆ ಇಳಿಯಬೇಕಿದೆ ಎಂದು ಗೋಷ್ಠಿಯಲ್ಲಿ ಭಾಗವಹಿಸಿದ ತಜ್ಞರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಇದೊಂದು ಅತ್ಯಂತ ಮಹತ್ವದ ಅಂಶವೆಂದು ತೋರುತ್ತದೆ. ಒಂದು ಕಾಲದಲ್ಲಿ ಸಹಕಾರದ ನಿಯಂತ್ರಣಕ್ಕೊಳಪಟ್ಟು ಅತ್ಯಂತ ವಿನೀತಭಾವದಿಂದ ತಮ್ಮ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದು ಖಾಸಗಿ ಕಾರ್ಪೋರೇಟ್ ವಲಯ, ಉದಾರೀಕರಣ, ಜಾಗತೀಕರಣದ ಪರಿಣಾಮವಾಗಿ ಸಹಕಾರ ವಿಧಿಸಿದ ನಿಯಂತ್ರಣಗಳನ್ನು ವ್ಯವಸ್ಥಿತವಾಗಿ ಭೇದಿಸಿಕೊಂಡು ಹೊರಬಂದು ಬಲಾಢ್ಯವಾಗಿ ಬೆಳೆದು ಈಗ ಆಳುವ ಸರಕಾರಗಳನ್ನೇ ನಿಯಂತ್ರಿಸುವಂತಹ, ದೇಶದ ಬಜೆಟ್ಟುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವಂತ ಮಟ್ಟಕ್ಕೆ ಬಂದು ಮುಟ್ಟಿದೆ. ಕಾರ್ಪೋರೇಟ್ ವಲಯದ ಏಕೈಕ ಉದ್ದೇಶ ಹಣದ ಉತ್ಪಾದನೆ ಅಂದರೆ ಹೆಚ್ಚಿನ ಲಾಭದ ಮೂಲಕ ಹಣವನ್ನು ಇನ್ನಷ್ಟು ದುಪ್ಪಟ್ಟು ಮಾಡುವುದೇ ಆಗಿದೆ. ಇಂತಹ ವಲಯಕ್ಕೆ ಸಾರ್ವಜನಿಕ ಬ್ಯಾಂಕುಗಳಿಂದ ಸಾಲ ನೀಡುವ ರಿಜರ್ವ್ ಬ್ಯಾಂಕು, ಅದೇ ಸಹಕಾರಿ ವಲಯದ ಬ್ಯಾಂಕುಗಳಿಗೆ ನಿರ್ಭಂದಕಾರಿ ಆದೇಶಗಳನ್ನು ಹೊರಡಿಸುವುದರ ಮೂಲಕ ಸಹಕಾರಿ ಸದಸ್ಯರ ಹಣವನ್ನು ಕಾರ್ಪೋರೇಟ್ ವಲಯಕ್ಕೆ ಹಂಚುವ ಹುನ್ನಾರವನ್ನು ನಡೆಸುತ್ತದೆ.

ಕಾರ್ಪೋರೇಟ್ ವಲಯದ ಲಾಭಕಾರಕ ಮನೋಭಾವಕ್ಕೆ ಹೋಲಿಸಿದರೆ ವಿಭಿನ್ನ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಸಹಕಾರಿ ವಲಯ ಸದಸ್ಯರ ಸುಸ್ಥಿರ ಅಭಿವೃದ್ಧಿಯನ್ನು ಮಾನದಂಡವಾಗಿಸಿಕೊಂಡು ಹೋಗುವ ಸೇವಾಕ್ಷೇತ್ರವಾಗಿದೆ. ಹಾಗಾಗಿ ಸಹಕಾರ ಕ್ಷೇತ್ರ ಸಮಾಜಮುಖಿ, ಸಹಕಾರ ಕ್ಷೇತ್ರದಲ್ಲಿ ಪ್ರಾಬಲ್ಯ ಉಳಿಯಬೇಕಾದರೆ ಸ್ವಾಯತತ್ತೆ, ಸಂವರ್ಧನೆ ಮತ್ತು ಸ್ವಾವಲಂಬನೆ ಅಗತ್ಯವಾಗುತ್ತದೆ. ಕಾರ್ಪೋರೇಟ್ ವಲಯದೊಂದಿಗೆ ಆರೋಗ್ಯಕರ ಪೈಪೋಟಿಗೆ ಸಹಕಾರ ಕ್ಷೇತ್ರ ಅಣಿಯಾಗಬೇಕಿದೆ. ಅದಕ್ಕೆ ಸೂಕ್ತ ಮುಂದಾಲೋಚನೆ, ಕ್ರಿಯಾಯೋಜನೆಗಳು, ತಜ್ಞ ಮಾರ್ಗದರ್ಶನ, ಅಪಾರವಾದ ಶ್ರದ್ಧೆ, ಎಲ್ಲವೂ ಮುಖ್ಯವಾಗುತ್ತದೆ. ಹಲವು ದಶಕಗಳ ಹಿಂದೆ ಗ್ರಾಮ ಮಟ್ಟದಲ್ಲಿ, ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮತ್ತು ಹೆಚ್ಚೆಂದರೆ ಜಿಲ್ಲಾ ಮಟ್ಟದಲ್ಲಿ ಮಾತ್ರ ವ್ಯವಹರಿಸುತ್ತಿದ್ದ ಸಹಕಾರ ಕ್ಷೇತ್ರ ಈಗ ರಾಜ್ಯಮಟ್ಟದಲ್ಲಿ ಬೆಳೆದು ನಿಂತಿದೆ. ಅಂತರರಾಜ್ಯದಲ್ಲಿ ಕೆಲವು ಸಂಸ್ಥೆಗಳು ವ್ಯವಹಾರ ನಡೆಸುತ್ತಿದೆ. ನಮ್ಮ ರಾಜ್ಯದ ರಾಜಕೀಯ, ಸಾಮಾಜಿಕ, ಆರ್ಥಿಕ, ಜನಜೀವನದಲ್ಲಿ ಸಹಕಾರ ಚಳುವಳಿಗಳು ತಮ್ಮದೇ ಆದ ಪಾತ್ರ ವಹಿಸಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಕಾಲಕ್ಕೆ ತಕ್ಕಂತೆ ತನ್ನ ದೃಷ್ಟಿಕೋನದಲ್ಲಿ ಸೂಕ್ತ ಮಾರ್ಪಾಡುಗಳನ್ನು ರೂಢಿಸಿಕೊಳ್ಳುತ್ತಾ ಸಾಗಿ ಬಂದ ಸಹಕಾರ ರಂಗ ಇಂದು ಕವಲುದಾರಿಯಲ್ಲಿದೆ. ಕಾರ್ಪೋರೇಟ್ ವಲಯದೊಂದಿಗೆ ಸ್ಪರ್ಧೆಯಂತಲ್ಲದ ಸ್ಪರ್ಧೆಗೆ ಇಳಿಯುತ್ತಲೇ ಬಡವರು ಮತ್ತು ಶೋಷಿತರ ಪರ ನಿಲ್ಲುವ ಕೆಲಸವನ್ನು ಮಾಡಬೇಕಾದ ಅನಿವಾರ್ಯ, ಮತ್ತು ಇಕ್ಕಟ್ಟು ಸಹಕಾರ ರಂಗದ ಮುಂದಿರುವ ಸವಾಲುಗಳು.

ಕನ್ನಡ ಸಾಹಿತ್ಯ ಸಮ್ಮೇಳನವು ಬರೀ ಸಾಹಿತ್ಯಕ ಚರ್ಚೆಗಳು ವೇದಿಕೆಯಾಗದೆ ಅದು ಕನ್ನಡದ ಸಮ್ಮೇಳವಾಗಬೇಕು, ಅಲ್ಲಿ ಸಾಹಿತ್ಯದ ಜೊತೆ-ಜೊತೆಯಲ್ಲಿ ಕನ್ನಡ ಜನರ ಪ್ರಸ್ತುತದ ಬದುಕಿನ ಸಂತಸ – ಸಮಸ್ಯೆ – ನೋವು ನಲಿವುಗಳ ಮಾತುಕತೆಯಾಗಬೇಕು ಎಂದು ಮಹತ್ವದ ಮಾರ್ಪಾಡಿನ ಚಿಂತನೆಯಾಗುತ್ತಿರುವ ಸಂದರ್ಭದಲ್ಲಿ ಗಂಗಾವತಿಯ ಸಮ್ಮೇಳನದಲ್ಲಿ ನಡೆದ "ಕರ್ನಾಟಕದಲ್ಲಿ ಸಹಕಾರಿ ಚಳುವಳಿಗಳು" ಎಂಬ ಗೋಷ್ಠಿ ಅತ್ಯಂತ ಅರ್ಥಪೂರ್ಣ.



## ಸೌಹಾರ್ದ ಸಹಕಾರಿ ದಿನಾಚರಣೆ : ಸಂಯುಕ್ತ ಸಹಕಾರಿಯ ಕಛೇರಿಯಲ್ಲಿ ಧ್ವಜಾರೋಹಣ

ಸಂಯುಕ್ತ ಸಹಕಾರಿ ಕಛೇರಿಯಲ್ಲಿ ದಿನಾಂಕ:1/1/2012ರಂದು ಬೆಳಗ್ಗೆ 8.30ಕ್ಕೆ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರಿಂದ ಸಪ್ತ ವರ್ಣಗಳ ಸಹಕಾರಿ ಧ್ವಜವನ್ನು ಹಾರಿಸಿ ಸಿಹಿ ಹಂಚುವ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಯುತರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ನೇತಾರನಾಗಿ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದೆ. ಸಂಯುಕ್ತ ಸಹಕಾರಿಯ ಪ್ರತಿಯೊಬ್ಬ ಸಿಬ್ಬಂದಿಯು ದಕ್ಷತೆಯಿಂದ ಕಾರ್ಯನಿರ್ವಹಿಸಿ ಸೌಹಾರ್ದ ಕ್ಷೇತ್ರ ಮುಖವಾಣಿಯಂತೆ ಕಾರ್ಯನಿರ್ವಹಿಸುವುದು ಇಂದಿನ ಆದ್ಯತೆಯಾಗಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



## ನೇರ ತೆರಿಗೆ ಸಂಹಿತೆ – ಸಹಕಾರಿ ಕ್ಷೇತ್ರಕ್ಕೆ ಸಂಪೂರ್ಣ ಬೆಂಬಲ – ಸಂಸದ ಶ್ರೀ ಪ್ರಹ್ಲಾದ ಜೋಷಿ

ಕರ್ನಾಟಕ ರಾಜ್ಯ ಮಹಾಮಂಡಳ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಧಾರವಾಡ ಜಿಲ್ಲಾ ಸಹಕಾರಿ ಯೂನಿಯನ್ ಇವರುಗಳ ಸಂಯುಕ್ತದಲ್ಲಿ ದಿನಾಂಕ 30/12/211 ರಂದು ಧಾರವಾಡ ಕೆಎಂಎಫ್ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ಹಾವೇರಿ, ಗದಗ್,ಧಾರವಾಡ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಒಂದು ದಿನ ತರಬೇತಿ ಕಾರ್ಯಕ್ರಮವನ್ನು ಲೋಕಸಭಾ ಸದಸ್ಯ ಶ್ರೀ ಪ್ರಹ್ಲಾದ ಜೋಷಿಯವರು ಉದ್ಘಾಟಿಸಿ, ಸಹಕಾರ ಕ್ಷೇತ್ರ ಶ್ರೀ ಸಾಮಾನ್ಯನ ಆರ್ಥಿಕ ಹಾಗೂ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರವಾದ್ದರಿಂದ ಈ ಕ್ಷೇತ್ರವನ್ನು "ತೆರಿಗೆ ಮುಕ್ತ" ಕ್ಷೇತ್ರವನ್ನಾಗಿ ಮಾಡಲು ಹಾಗೂ ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರ ಕ್ಷೇತ್ರಗಳಿಗೆ ಮಾರಕವಾಗಿರುವ ಪರಿಚ್ಛೇದಗಳನ್ನು ಕೈಬಿಡುವಂತೆ ಹಾಗೂ ಈ ಮೊದಲಿನ 80ಪಿ ಪರಿಚ್ಛೇದಗಳನ್ನು ಮುಂದುವರೆಸುವಂತೆ ಕೇಂದ್ರದ ಹಣಕಾಸು ಸಚಿವರಲ್ಲಿ ನಿಯೋಗದ ಮೂಲಕ, ಮನವಿ ಮೂಲಕ ಬೆಂಬಲಿಸಲು ಸಿದ್ಧವೆಂದು ಹೇಳಿದರು. ಮುಂದುವರೆದು ಮಾತನಾಡುತ್ತಾ ಈ ಕಾರ್ಯಕ್ರಮವು ಸಹಕಾರಿ ಕ್ಷೇತ್ರದಲ್ಲಿ ಆಧುನಿಕತೆಯನ್ನು ಅಳವಡಿಸುವ ದೃಷ್ಟಿಯಿಂದ "ಹೈಟೆಕ್ ತರಬೇತಿ ಕಾರ್ಯಕ್ರಮ"ವೆಂದು ಹೆಸರಿಸಲಾಗಿದ್ದು, ಇದೊಂದು ಉತ್ತಮ ತರಬೇತಿ ಕಾರ್ಯಕ್ರಮವೆಂದು ಎಲ್ಲ ಸಂಸ್ಥೆಗಳು ಈ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷರಾದ ಶ್ರೀ ಬಾಪು ಗೌಡ ಪಾಟೀಲರು ವಹಿಸಿದ್ದು, ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ರವಿ ಎಲಿಗಾರ್, ನವಲಗುಂದದ ಶಾಸಕರಾದ ಶ್ರೀ ಶಂಕರ ಪಾಟೀಲ್ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಎಂ. ಈ. ಪಾಟೀಲ್, ಸಹಕಾರಿ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಎಂ. ಡಿ. ಮಠಪತಿ, ಡಿಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶಿವಕುಲಕರ್ಣಿ, ಉಪನಿಬಂಧಕ ಶ್ರೀ ವೀರಣ್ಣ ಎಳಲ್ಲಿ, ಸಹಕಾರ ಮಹಾಂಡಳದ ನಿರ್ದೇಶಕರುಗಾದ ಶ್ರೀ ಎನ್. ಎಂ. ಹಿರೇಮಠ್ ಶ್ರೀ ಶಿವನಗೌಡ ಬಿರಾದರ್ ಶ್ರೀಎಲ್.ಎಂ.ಪಾಟೀಲ್, ಶ್ರೀ ಷಣ್ಮುಖ ವುಗಿಯಾರ್ ಮುಂತಾದವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 39 ಸೌಹಾರ್ದ ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿದ್ದರು. ಬೆಳಗಾವಿಯ ವಕೀಲರಾದ ಶ್ರೀ ದಿನೇಶ ಪಾಟೀಲ್ ಸಾಲ ಪತ್ರ ದಾಖಲಾತಿ ಬಗ್ಗೆ, ಶ್ರೀ ಎಸ್. ಎಸ್. ಹಾದಿಮನಿಯವರು ಸಾಲ ವಸೂಲಾತಿಯ ಬಗ್ಗೆ, ಶ್ರೀ ಎಂ. ವಿಜಯ ಪಂಜಪ್ಪ ಚಾರ್ಟೆಡ್ ಅಕೌಂಟೆಟ್ ಇವರು ಆದಾಯ ತೆರಿಗೆ ಕಾಯ್ದೆಯ ಪ್ರಮುಖ ಅಂಶಗಳ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮವು ತುಂಬಾ ಪ್ರಯೋಜನಕಾರಿಯಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ಪಟ್ಟರು.

## ಸಂಯುಕ್ತ ಸಹಕಾರಿಯ ಜನವರಿ ಮಾಹೆಯ ತರಬೇತಿ ಕಾರ್ಯಕ್ರಮಗಳು

| | |
|---|---|
| 1) ದಿನಾಂಕ 9-1-2012 ಹಾಗೂ 10-1-2012<br>9-1-2012 1ನೇ ತಂಡ | ಇ-ಸ್ಟಾಂಪಿಂಗ್ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ<br>ಬೆಂಗಳೂರು ಜಿಲ್ಲೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಳಗ್ಗೆ 9-00 ರಿಂದ 1-00 ಬಾಗಲಕೋಟೆ, ಬಳ್ಳಾರಿ, ಉತ್ತರ ಕನ್ನಡ ಜಿಲ್ಲೆಗಳು ಹಾಗೂ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕೇಂದ್ರಗಳು. |
| 2) 2ನೇ ತಂಡ ಮಧ್ಯಾಹ್ನ 2.00 ರಿಂದ 6.00 | ಬೆಳಗಾವಿ ಜಿಲ್ಲೆಯ ಚಿಕ್ಕೋಡಿ,ಅಥಣಿ,ಗೋಕಾಕ, ಖಾನಾಪುರ ಹುಕ್ಕೇರಿ ತಾಲ್ಲೂಕುಗಳು, ತುಮಕೂರು ಜಿಲ್ಲೆ, ಬೀದರ ಜಿಲ್ಲೆ ಹಾಗೂ ಬಿಜಾಪುರ ಜಿಲ್ಲೆಗಳ ಕೇಂದ್ರಗಳು. |
| 3) ದಿನಾಂಕ : 10/1/2012<br>ಬೆಳಗ್ಗೆ 9-00ರಿಂದ 1-00 3ನೇ ತಂಡ | ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಧಾರವಾಡ, ಗದಗ, ಹಾಸನ, ರಾಯಚೂರು, ರಾಮನಗರ, ಕೋಲಾರ, ಕೊಡಗು, ಶಿವಮೊಗ್ಗ, ಹಾಗೂ ಉಡುಪಿ ಜಿಲ್ಲೆಗಳು. |
| 4) 4ನೇ ತಂಡ ಮಧ್ಯಾಹ್ನ<br>2.00 ರಿಂದ 6.00ರವರೆಗೆ | ಗುಲ್ಬರ್ಗಾ, ಹಾವೇರಿ, ಕೊಪ್ಪಳ, ಮೈಸೂರು,ದಕ್ಷಿಣ ಕನ್ನಡ, ಯಾದಗಿರಿ ಜಿಲ್ಲೆಗಳು, ಬೆಳಗಾವಿ ತಾಲ್ಲೂಕು ರಾಯಬಾಗ ತಾಲ್ಲೂಕು, ಸವದತ್ತಿ ತಾಲ್ಲೂಕು. |

* ದಿನಾಂಕ: 11-01-2012 ಬೆಂಗಳೂರು ಹಾಗೂ ಮೈಸೂರು ವಿಭಾಗಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆ.
* ದಿನಾಂಕ: 12-01-2012 ಬೆಳಗ್ಗೆ 9.00 ರಿಂದ 1.00 ರ ವರೆಗೆ ಬೆಳಗಾವಿ ಹಾಗೂ ಹುಕ್ಕೇರಿ ತಾಲ್ಲೂಕು. ಮಧ್ಯಾಹ್ನ : 2.00 ರಿಂದ 6.00 ರವರೆಗೆ ಬಿಜಾಪುರಹಾಗೂ ಬಾಗಲಕೋಟೆ ಜಿಲ್ಲೆಗಳು
* ದಿನಾಂಕ : 13-01-2012ರ ಬೆಳಗ್ಗೆ 9.00 ರಿಂದ 1.00ರ ವರೆಗೆ ಬೈಲಹೊಂಗಲ, ಚಿಕ್ಕೋಡಿ, ಗೋಕಾಕ್,ಖಾನಾಪುರ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕುಗಳು. ಮಧ್ಯಾಹ್ನ 2.00ರಿಂದ 6.00 ರವರೆಗೆ ಧಾರವಾಡ,ಗದಗ, ಹಾವೇರಿ, ಉತ್ತರ ಕನ್ನಡ ಜಿಲ್ಲೆಗಳು, ಅಥಣಿ,ರಾಯಬಾಗ ತಾಲ್ಲೂಕುಗಳು.

# ಶ್ರೀ ವಿವೇಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವತಿಯಿಂದ ಉಚಿತ ದಂತ ಚಿಕಿತ್ಸಾ ಶಿಬಿರ

ಅಂಕೋಲಾ: ಗ್ರಾಮೀಣ ಪ್ರದೇಶದ ಜನರಿಗೆ ದಂತ ಚಿಕಿತ್ಸೆಯ ಶಿಬಿರವನ್ನು ವಿವಿಧ ಸಂಘಟನೆಯವರು ಸೇರಿ ನಡೆಸಿ ಕೊಡುವ ಈ ಪ್ರಯೋಗ ಗ್ರಾಮೀಣ ಜನರಿಗೆ ಬಹಳ ಉಪಯೋಗವಾಗಿದೆ ಎಂದು ಸಹಕಾರಿ ಧುರೀಣರಾದ ಶ್ರೀ ಆರ್.ಎನ್.ನಾಯಕ ಹೇಳಿದರು. ಅವರು ಬೇಲೇಕೇರಿಯ ಕೇಶವಾನಂದ ನಾಯಕರವರ ವಿವೇಕ ಸಭಾ ಭವನದಲ್ಲಿ ಮಣಿಪಾಲ ಕೆ.ಎಂ.ಸಿ ದಂತ ಮಹಾವಿದ್ಯಾಲಯದ ತಜ್ಞ ವೈದ್ಯ ತಂಡದವರಿಂದ ಏರ್ಪಡಿಸಿದ "ಬೃಹತ್ ಉಚಿತ ದಂತ ಚಿಕಿತ್ಸಾ ಶಿಬಿರ"ವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ಶ್ರೀ ಉದಯ ಡಿ.ನಾಯ್ಕ ಮುಂತಾದವರು ಭಾಗವಹಿಸಿದ್ದರು.




ಕುಮಟಾ ಶ್ರೀ ವಿದ್ಯಾಧಿರಾಜ ಪಾಲಿಟೆಕ್ನಿಕ್ ಪ್ರಾಂಶುಪಾಲ ಶ್ರೀ ರತನ್ ಗಾಂವಕರ, ಮಣಿಪಾಲ ಕೆ.ಎಂ.ಸಿಯ ತಜ್ಞವೈದ್ಯ ತಂಡದ ನಾಯಕ ಡಾ॥ ಕಲ್ಯಾಣ, ವೇದಿಕೆಯಲ್ಲಿ ಉಪಸ್ಥಿತರಿದ್ದರು,

ಡಾ॥ ಸಂಬು ಟಿ.ನಾಯಕ, ಡಾ॥ ಎಂ.ಎಂ. ಸೈಯದ್, ಭಾವಿಕೇರಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾದ ಉದಯ ಮಾವನ ನಾಯಕ, ಖಾರ್ವಿವಾಡಾ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ಶ್ರೀ ಸುರೇಶ ಗೋಳಿಕರ, ಲಯನ್ಸ್ ಕ್ಲಬ್‌ನ ಪ್ರಮುಖರಾದ ಶ್ರೀ ದೇವಾನಂದ ಗಾಂವಕರ ನೇರಳಕಟ್ಟೆ, ಶ್ರೀ ಕೆ.ಆರ್. ನಾಯಕ ಕೆ.ಎಲ್.ಇ. ಕೌಟುಂಬಿಕ ಸಲಹಾ ಕೇಂದ್ರ ಸಲಹೆಗಾರ ಶ್ರೀ ತಿಮ್ಮಣ್ಣ ಭಟ್ ಮುಂತಾದವರು ಆಗಮಿಸಿದ್ದರು.

ಸ್ನೇಹಕುಂಜದ ಯೋಜನಾಧಿಕಾರಿ ಶ್ರೀ ರವೀಂದ್ರ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಮಹಾದೇವ ಪ್ರತಿಭಾ ಪುರಸ್ಕಾರದ ಅಧ್ಯಕ್ಷ ಶ್ರೀ ಶ್ರೀನಿವಾಸ ನಾಯಕ ನಿರ್ವಹಿಸಿದರು. ಕಾರ್ಯದರ್ಶಿ ಶ್ರೀ ನಿತ್ಯಾನಂದ ಗಾಂವಕರ ವಂದಿಸಿದರು. ಬೇಲೇಕೇರಿ ಸಹಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಸ್ವಾಗತಗೀತೆ ಹಾಡಿದರು.

ವಿವೇಕ ಸೌಹಾರ್ದ ಸಹಕಾರಿ ನಿಯಮಿತ ಬೇಲೇಕೇರಿ, ಲಯನ್ಸ್‌ಕ್ಲಬ ಅಂಕೋಲಾ, ಗ್ರಾಮ ಪಂಚಾಯಿತಿ ಬೇಲೇಕೇರಿ ಮಹಾದೇವ ಪ್ರತಿಭಾ ಪುರಸ್ಕಾರ ಸಾಂಸ್ಕೃತಿಕ ಸಂಘ, ಬೇಲೇಕೇರಿ ಸ್ನೇಹಕುಂಜ ಹೊನ್ನಾವರ ಸಮುದಾಯ ಅಭಿವೃದ್ಧಿ ಪಾಲಿಟೆಕ್ನಿಕ್ ಕುಮಟಾ ಇವರ ಸಂಯುಕ್ತ ಆಶ್ರಯದಲ್ಲಿ ಸಂಘಟಿಸಲಾಯಿತು. 500ಕ್ಕೂ ಹೆಚ್ಚು ಜನರು ಈ ಶಿಬಿರದ ಪ್ರಯೋಜನ ಪಡೆದುಕೊಂಡರು.

# ಜನಹಿತ ಸೌಹಾರ್ದ ಸಹಕಾರಿ – ನೂತನ ಶಾಖೆಯ ಉದ್ಘಾಟನೆ



ಉಡುಪಿ: ದಿನಾಂಕ:04/12/2011ರಂದು ಉಡುಪಿಯಲ್ಲಿ ಪ್ರಧಾನ ಕಛೇರಿ ಹೊಂದಿರುವ ಜನಹಿತ ಸೌಹಾರ್ದ ಸಹಕಾರಿಯು ಇದರ ಶಾಖೆಯನ್ನು ಕಾರ್ಕಳದಲ್ಲಿ, ಕಾರ್ಕಳ ಕ್ಷೇತ್ರದ ಶಾಸಕ ಶ್ರೀ ಹೆಚ್. ಗೋಪಾಲ ಭಂಡಾರಿಯವರು ಉದ್ಘಾಟಿಸಿ, ಹಣ ನಿಂತ ನೀರಾಗದೆ. ಹರಿಯುವ ನೀರಾಗಿಸುವಲ್ಲಿ ಹಾಗೂ ಜನರಲ್ಲಿ ಸಂಪನ್ಮೂಲ ಕ್ರೋಢೀಕರಿಸುವ ನಿಟ್ಟಿನಲ್ಲಿ ಇಂತಹ ಸಂಸ್ಥೆಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತವೆ. ಉತ್ತಮ ಆಡಳಿತ ಮಂಡಳಿಯನ್ನು ಹೊಂದಿರುವ ಈ ಸಹಕಾರಿಯಿಂದ ಜನರಿಗೆ ಉತ್ತಮ ಸೇವೆ ದೊರೆಯುವುದರಲ್ಲಿ ಸಂಶಯವಿಲ್ಲ. ಜೊತೆಗೆ ಸಂಸ್ಥೆಯು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಹೊಂದಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಶ್ರೀ ಉಪೇಂದ್ರ ನಾಯಕ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು, ಉಪಾಧ್ಯಕ್ಷರಾದ ಸದಾನಂದ ಪ್ರಭು,ನಿರ್ದೇಶಕರೂ ಹಾಗೂ ಸ್ಥಾಪಕಾಧ್ಯಕ್ಷರು ಆದ ಶ್ರೀ ವೈ.ಎಸ್. ಮಡಿವಾಳ, ಶ್ರೀ ಕೃಷ್ಣ ಯು.ವಿ. ಶ್ರೀ ಗೋಪಾಲಸಿ ಮೂಲ್ಯ, ಶ್ರೀ ವಸಂತ್ ನಾಯ್ಕ್, ಶ್ರೀ ವಿಜಯ ಶೆಟ್ಟಿ ಶ್ರೀ ಮಂಜುನಾಥ ನಾಯ್ಕ್, ಶ್ರೀ ಶಶಿಧರನ್, ಶ್ರೀ ಬಾಲಕೃಷ್ಣ ಎ.ಎಸ್. ಶ್ರೀ ಕೃಷ್ಣ ಎಂ.ಶ್ರೀ ಸಾಲ್ಮಾನ್, ಹಾಗೂ ಶ್ರೀ ವಿಜಯ್‌ರವರು ಉಪಸ್ಥಿತರಿದ್ದರು.

# ಆರ್ಥಿಕ ಕ್ಷೇತ್ರದಲ್ಲಿ ಸಾಮಾಜಿಕ ಕಳಕಳಿ ಮೆರೆದಿರುವ – ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್




ಕಳೆದ 9 ವರ್ಷದಿಂದ ನಮ್ಮ ಜಿಲ್ಲೆಯ ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಇದಕ್ಕೆ ಪರ್ಯಾಯವಾಗಿ ಬೆಳೆಯುತ್ತಿರುವುದು ಸಂತೋಷದ ಸಂಗತಿ ಆಗಿದೆ. ಪರಿಶುದ್ಧ ವ್ಯವಹಾರ,ಸದೃಢತೆ, ವಿಶ್ವಾಸಾರ್ಹತೆ, ಕ್ಷಿಪ್ರತೆಗೆ ಈ ಸಾಧನೆಗೆ ಷೇರುದಾರರು,ಠೇವಣಿದಾರರು, ಇತರ ಎಲ್ಲ ವಿಭಾಗದವರು ಹಾಗೂ ಸಿಬ್ಬಂದಿಗಳು ಕಾರಣ ಭೂತರಾಗಿದ್ದಾರೆ. ಈ ಸಂಸ್ಥೆಯು ನಡೆಸಿಕೊಟ್ಟ ಕೆಲವು ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅವುಗಳಲ್ಲಿ ಕುಟುಂಬ ಮಿಲನ, ಮಧ್ಯಮ ವರ್ಗದ ಕುಟುಂಬಗಳಲ್ಲಿ ಹಣಕಾಸಿನ ನಿರ್ವಹಣೆ ಭಾರತದ ಆರ್ಥಿಕತೆಯ ಶಕ್ತಿ ಕುಟುಂಬ, ಈ ತರಹದ ಉತ್ತಮವಾದ, ಸೌಹಾರ್ದಯುತವಾದ ಹಿತವಾದ ಸೇವೆಯನ್ನು ನೀಡುತ್ತಿದೆ.ಎಂದು ಸಹಕಾರಿಯ ಅಧ್ಯಕ್ಷ ಶ್ರೀ ಎಂ. ಎಸ್. ವೆಂಕಟೇಶ್ ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಎ. ಮೈಲಾರಿ ಶಿವಮೊಗ್ಗ ಮಾಧವನೆಲೆಯ ಸಂಚಾಲಕರು, ಶ್ರೀ ವಿ. ಎಸ್. ಕೇಶವಮೂರ್ತಿ (ಬಸ್ ಬಾಬಣ್ಣ) ಅವರನ್ನು ಸನ್ಮಾನಿಸಲಾಯಿತ. ಎಡಬದಿಯಿಂದ 3ನೇಯವರು ಪ್ರೊ॥ಬಿ.ಎಂ. ಕುಮಾರ ಸ್ವಾಮಿ ಆರ್ಥಿಕ ತಜ್ಞರು, ನಿವೃತ್ತ ಪ್ರಾಂಶುಪಾಲರು 2ನೇಯವರು ಶ್ರೀ ಎಂ.ಎಸ್. ವೆಂಕಟೇಶ್ ಅಧ್ಯಕ್ಷರು. ಮಯೂರ ಸೌಹಾರ್ದ.

Swabhimani Sahakari, Monthly, Posted at GPO-MBC Post Office 560001, Posting Day 12th. Reg. No. RNP/BGS/2094/20011-13 Licence to post. RNI No.: KARBIL/2004/18001

## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ



# ಡಾ|| ಜಿ. ಎಸ್. ಮಹಾಬಲ – ಕೃಷಿ ಹಾಗೂ ಆರ್ಥಿಕ ಪರಿಣಿತ, ನುರಿತ ಸಹಕಾರಿ



ಶ್ರೀ ಜಿ.ಎಸ್. ಮಹಾಬಲರವರು ದಿನಾಂಕ:15/09/1963 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಗದ್ದೆಮನೆ ಗ್ರಾಮದಲ್ಲಿ ಕೃಷಿ ಕುಟುಂಬದಲ್ಲಿ ಜನನ. ತಂದೆ ಶ್ರೀ ಬಿ. ಸೀತಾರಾಮಯ್ಯನವರ ಪ್ರೋತ್ಸಾಹ ಹಾಗೂ ಮಾರ್ಗದರ್ಶನದಲ್ಲಿ ಬಸರಿಕಟ್ಟೆ ಯಲ್ಲಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಪ್ರೌಢಶಿಕ್ಷಣವನ್ನು ಪಡೆದು ಕೃಷಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಮೂಲಕ ಪಡೆದರು. ಕೃಷಿ ವಿಷಯದಲ್ಲಿಯೇ ಅಧ್ಯಯನ ಮಾಡಿ ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದರು. ಶ್ರೀಯುತರು ಸೌಮ್ಯ ಹಾಗೂ ಶಾಂತ ಸ್ವಭಾವದವರು ನಿರಂತರ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಯೋಜನೆಗಳ ಬಗ್ಗೆ ಅನುಷ್ಠಾನದ ಬಗ್ಗೆ ಚಿಂತನೆ ಅದರಲ್ಲೂ ಸರ್ಕಾರದ ಬಹುಪಾಲು ಯೋಜನೆಗಳನ್ನು ಸಹಕಾರ ಕ್ಷೇತ್ರದ ಮೂಲಕವೇ ಅನುಷ್ಠಾನಗೊಳಿಸಿದರೆ ಸಾಮಾನ್ಯ ಜನರಿಗೆ ಹೆಚ್ಚಿನ ಪ್ರಯೋಜನ ಸಾಧ್ಯವೆಂದು ಅಭಿಪ್ರಾಯ ಪಡುತ್ತಾರೆ.

ಶ್ರೀಯುತರು ಪ್ರಸ್ತುತ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ನಿರ್ದೇಶಕರಾಗಿ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಚಿಕ್ಕಮಗಳೂರು ನಿರ್ದೇಶಕರಾಗಿ, ಯಡಗೆರೆ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ನಿರ್ದೇಶಕರಾಗಿ, ಕೊಪ್ಪ ಪಿಕಾರ್ಡ್ ಬ್ಯಾಂಕಿನ ನಿರ್ದೇಶಕರಾಗಿ, ಕೃಷಿ ಪತ್ತಿನ ಸಹಕಾರಿ ಕೊಪ್ಪ ಸದಸ್ಯರಾಗಿ, ಸೇವೆ ಸಲ್ಲಿಸುತ್ತಿದ್ದಾರೆ.

ಸಾಮಾಜಿಕವಾಗಿ ಕೊಪ್ಪ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ಹಾಗೂ ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಶ್ರೀಯುತರು ಸೆಂಟ್ ಜೋಸೆಫ್ ಕಾನ್ವೆಂಟ್ ಕೊಪ್ಪ ಇದರ ಅಧ್ಯಕ್ಷರಾಗಿ ಶಿಕ್ಷಣ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದಾರೆ.

ಕೃಷಿ ಹಣಕಾಸು ಕಾರ್ಪೋರೇಷನ್‌ನಲ್ಲಿ ಪ್ರಾಜೆಕ್ಟ್ ಇನ್ವೆಸ್ಟಿಗೇಟರ್, ಸೇರಿ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಆರ್ಥಿಕ ತಜ್ಞರಾಗಿ, ಯೋಜನಾ ವ್ಯವಸ್ಥಾಪಕರಾಗಿ ಆಯಿಲ್ ಹಾಗೂ ಪಾಮ್ ಪ್ರಾಜೆಕ್ಟ್‌ನಲ್ಲಿ ಹೀಗೆ ಅನುಭವದ ಖಣಿಯಾಗಿದ್ದಾರೆ. ಕರ್ನಾಟಕ ಯೋಜನಾ ಆಯೋಗದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ ಅನುಭವ ಶ್ರೀಯುತರಿಗಿದೆ. ಶ್ರೀಯುತರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಹಕಾರ ಕ್ಷೇತ್ರದಲ್ಲಿ ಯುವಕರು ಹೆಚ್ಚು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕೆಂದು ಅಭಿಪ್ರಾಯ ಪಡುತ್ತಾರೆ.

# ಕ್ರಿಯಾಶೀಲ ಸಹಕಾರಿ ಶ್ರೀ ಎಮ್.ಕೆ.ಸೋಮಯ್ಯ



ಸುಂದರವಾದ ಮತ್ತು ದಕ್ಷಿಣಕಾಶಿ, ಕರ್ನಾಟಕದ ಕಣ್ಮಣಿ ಎನಿಸಿದ ಪುಟ್ಟ ಜಿಲ್ಲೆ ಕೊಡಗು. ಪ್ರತಿಯೊಂದು ಕುಟುಂಬದಲ್ಲಿ ಒಬ್ಬರು ದೇಶಸೇವೆಯಲ್ಲಿ ತೊಡಗಿಸಿಕೊಂಡಹಾಗೆ ಒಬ್ಬರು ಸಹಕಾರಿ ಕ್ಷೇತ್ರದಲ್ಲೂ ತೊಡಗಿಸಿಕೊಳ್ಳುವ ಸ್ವಭಾವ ಈ ಕೊಡಗಿನ ಜಿಲ್ಲೆಯವರದು. ಜಿಲ್ಲೆ ಪುಟ್ಟದಾದರೂ ಸಹಕಾರಿ ವಲಯದಲ್ಲಿ ಅಪಾರ ಸಾಧನೆ ಹಾಗೂ ಕೀರ್ತಿಗಳಿಸಿದ ಸಹಕಾರಿಗಳನ್ನು ಈ ಜಿಲ್ಲೆ ಕೊಟ್ಟಿದೆ. ಇಂಥಹ ಪ್ರತಿಷ್ಠಿತ ಜಿಲ್ಲೆಯ ಪ್ರತಿನಿಧಿಯಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿದ್ದಾರೆ ಶ್ರೀಯುತಎಮ್.ಕೆ.ಸೋಮಯ್ಯನವರು 1943ರಂದು ಮದ್ರಿರ ಕಾಳಾಯ ದಂಪತಿಗಳ ಮೂರನೇ ಮಗನಾಗಿ ರೈತ ಕುಟುಂಬದಲ್ಲಿ ಜನಿಸಿ ಇವರು ಪ್ರಾಥಮಿಕ, ಪ್ರೌಢ, ಹಾಗೂ ಪದವಿಪೂರ್ವ ವಿದ್ಯಾಭ್ಯಾಸವನ್ನು ಪೊನ್ನಂಪೇಟೆಯಲ್ಲಿ ಮುಗಿಸಿ, ಸ್ನಾತಕೋತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಡೆದರು.

**ಸಹಕಾರ ಕ್ಷೇತ್ರದಲ್ಲಿ ಸೇವೆ :** ರಾಜ್ಯದಲ್ಲೇ ಅತ್ಯುತ್ತಮ ಡಿಸಿಸಿಬ್ಯಾಂಕ್‌ಯೆಂದು ಖ್ಯಾತಿವೆತ್ತ,ಕೊಡಗಿನಡಿಸಿಸಿಬ್ಯಾಂಕ್‌ನ ಶಾಖಾಪ್ರವರ್ತಕರಾಗಿ ಸೇರ್ಪಡೆಯಾಗಿ ಸುದೀರ್ಘ ಸೇವೆಮಾಡಿ ಕೊನೆಯ 10ವರ್ಷಗಳಲ್ಲಿ ಪ್ರಧಾನ ವ್ಯವಸ್ಥಾಪಕರಾಗಿಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದಾರೆ.ಸತತವಾಗಿ ಮೂರುವರ್ಷಗಳ ಕಾಲ ನಬಾರ್ಡ್‌ನಿಂದ ರಾಷ್ಟ್ರ ಪ್ರಶಸ್ತಿ ತಂದುಕೊಡುವಲ್ಲಿ ಪ್ರಧಾನ ಪಾತ್ರದಾರಿಯಾಗಿದ್ದಾರೆ.

ನಿವೃತ್ತಿಯ ನಂತರ ಸಹಕಾರಿ ಸೇವೆಯ ಅನುಭವವನ್ನು ಧಾರೆಯೆರೆದು ಪ್ರಬಲವಾಗಿ ಬೆಳೆಯುತ್ತಿರುವ ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ-ಅಪರೇಟಿವ್ ಅನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ನಿರಂತರ ವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕೊಡಗಿನವಿಶಿಷ್ಟ ಸಹಕಾರಿ ಸಂಸ್ಥೆಯಾದ ಈಚೂರು ಸಹಕಾರ ದವಸ ಭಂಡಾರದ ಅಧ್ಯಕ್ಷರಾಗಿ ಸೇವೆಸಲ್ಲಿಸುತ್ತಿದ್ದಾರೆ. ಹಾಡೂರು ವ್ಯವಸಾಯ ಸೇವಾ ಸಹಕಾರ ಸಂಘದ ಮತ್ತು ಪೊನ್ನಪೇಟೆ ಪಟ್ಟಣ ಸಹಕಾರಿ ಬ್ಯಾಂಕಿನ ಚುನಾಯಿತ ನಿರ್ದೇಶಕನಾಗಿ ಮತ್ತು ಸಹಕಾರ ಸಂಘಗಳ ಉದ್ಯೋಗಸ್ಥರ ಸಹಕಾರ ಸಂಘದ (ಎಲ್ಲವೂ ಒಂದಕ್ಕೊಂದು ವಿಭಿನ್ನವಾದ ಸಹಕಾರಿಸಂಸ್ಥೆಗಳು) ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಸಾಮಾಜಿಕ ಸೇವೆ :** 28 ವರ್ಷಗಳ ಹಿಂದೆ ಬ್ಯಾಂಕಿನಲ್ಲಿ ನೌಕರಿಯಲ್ಲಿದ್ದಾಗಲೇ, ಕೊಡಗಿನ ಅಸ್ತಿತ್ವಕ್ಕೆ ತರುವ ಅಣೆಕಟ್ಟನ್ನು ವಿರೋಧಿ ಸಮಿತಿಯ ನೇತೃತ್ವವಹಿಸಿ ರಾಮಕೃಷ್ಣ ಹೆಗಡೆ ಸರ್ಕಾರದ ವಿರುದ್ಧ ಪ್ರಬಲವಾದ ಪ್ರತಿಭಟನೆ ನಡೆಸಿ ಜಯಶೀಲರಾಗಿದ್ದಾರೆ. ಈಗ 300 ಸಾವಿರ ಸದಸ್ಯರಿರುವ ಬೃಹತ್ ಕೊಡವ ಸಮುದಾಯ ಸಮಾಜ ಸ್ಥಾಪಿಸಿ ಅದರ ಅಧ್ಯಕ್ಷನಾಗಿ (25 ವರ್ಷಗಳ ಹಿಂದೆ) ಆರು ವರ್ಷಸೇವೆ ವಿರಾಜಪೇಟೆಯಲ್ಲಿ ಲಯನ್ಸ್ ಕ್ಲಬ್ ಮತ್ತು ಇತರ ಅನೇಕ ಸೇವಾ ಕೇಂದ್ರ ಗಳನ್ನು ಸ್ಥಾಪಿಸಿ,ಅಧ್ಯಕ್ಷನಾಗಿಯೂ ನಿರ್ದೇಶಕರಾಗಿಯೂ ನಿರಂತರ ಸೇವೆ. ಶ್ರೀ ಎ.ಕೆ. ಸುಬ್ಬಯ್ಯ ಮತ್ತು ಅನೇಕ ಹಿರಿಯರೊಡನೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಿಬಿರದಲ್ಲಿ ಪಾಲ್ಗೊಂಡು ಸಿದ್ಧಾಂತಿಕವಾಗಿ ಅಂದಿನ ಜನ ಸಂಘ(ಈಗ ಬಿಜೆಪಿ) ಯಲ್ಲಿ 48 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಯುತರು ಸಹಕಾರಿ ಕ್ಷೇತ್ರದ ಮೂಲಕ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ ಈ ಕ್ಷೇತ್ರ ಬಲಿಷ್ಠವಾಗಿ ಬೆಳೆಯಬೇಕೆಂದು ಮಹಿಳೆಯರು ಹಾಗೂ ಯುವಕರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ಪಾಲ್ಗೊಳ್ಳುವುದು ಅವಶ್ಯಕವೆಂದುಅಭಿಪ್ರಾಯಪಡುತ್ತಾರೆ.

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲಗೋಳ ಕಾಂಪ್ಲೆಕ್ಸ್, ಶೆಂಗಟ್ಟಿ, ಬೆಳಗಾವಿ-1. ದೂ. 0831-240551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಡಿ.2, ಶೇ ಮಹಡಿ, ರಚಿ ಬಿಲ್ಡಿಂಗ್, ಸೂಪರ್ ಮಾರ್ಕೆಟ್, ಗುಲ್ಬರ್ಗಾ-2

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು - 560010.
web : www.souharda.coop, E-mail : souharada@souharada.coop
ದೂರವಾಣಿ ಸಂಖ್ಯೆಗಳು :
23378375/76/77/78/79/80 ಹಾಗೂ 23474408, 23573291

ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ,
ಸಂಚಿಕೆ ಸಿದ್ಧತೆ ವಿ.ಜಿ.ಕಾರಕೂನ
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

# ಸ್ವಾಭಿಮಾನಿ ಸಹಕಾರಿ

ಅಂತರರಾಷ್ಟ್ರೀಯ ಸಹಕಾರಿ ವರ್ಷ - 2012

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಪುಟ 10 * ಸಂಚಿಕೆ 01 * ಜನವರಿ 2012 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- * ಬೆಲೆ ರೂ. 5/-



ನೇರ ತೆರಿಗೆ ಸಂಹಿತೆಯಲ್ಲಿ ಸಹಕಾರಿ ಸಂಸ್ಥೆಗಳಿಗೆ ಮಾರಕವಾಗುವ ಪರಿಚ್ಛೇದಗಳನ್ನು ಕೈಬಿಡುವಂತೆ ಒತ್ತಾಯಿಸಿ ಬೆಂಗಳೂರಿನಲ್ಲಿ ಕ್ರೆಡಿಟ್ ಸಹಕಾರಿಗಳ ಬೃಹತ್ ಸಮಾವೇಶ.



ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ಹಂಪಿ.



ಸಂಯುಕ್ತ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



ಧಾರವಾಡದ ತರಬೇತಿ ಕಾರ್ಯಕ್ರಮದಲ್ಲಿ ಸಂಸದ ಶ್ರೀ ಪ್ರಹ್ಲಾದ ಜೋಷಿಯವರಿಂದ ಸಮಾವೇಶಕ್ಕೆ ಪೂರ್ಣ ಬೆಂಬಲ.



## ಸೌಹಾರ್ದ ಸಹಕಾರಿ ದಿನ, ಹೊಸ ವರ್ಷ, ಮಕರ ಸಂಕ್ರಾಂತಿ ಹಾಗೂ ಗಣರಾಜ್ಯೋತ್ಸವದ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ.



ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ ........ 2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 3,4,5
ಹಂಪಿ ತರಬೇತಿ ಕಾರ್ಯಾಗಾರ (ಶಿಬಿರಾರ್ಥಿಗಳ ಅನಿಸಿಕೆ) ........ 6,7
ಕ್ಯಾಲೆಂಡರ್ ........ 8,9
ಸುತ್ತೋಲೆ, ಸೌಹಾರ್ದ ಸಹಕಾರಿ ಸಮಾಚಾರ ........ 10,11
ಲೇಖನಗಳು ........ 12,13
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 14,15
ನಿರ್ದೇಶಕರ ಪರಿಚಯ ........ 16

ಸೌಹಾರ್ದ ಸಹಕಾರಿಗಳ ಸಂಖ್ಯೆ : 1893 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 421